ಖಂಡ ೧ ಇತ್ಯಾದಿ ;

ಅಧ್ಯಕ್ಷರು.—**ಪ್ರಸ್ತಾವ ಏನೆಂದರೆ** ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವನ್ನು ಅಂಗೀಕರಿಸಲಾಯಿತು ಹಾಗೂ

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಹಾಗೂ ಸಂಸದೀಯ ಮಂತ್ರಿಗಳು).—೧೯೮೭ನೇ ಇಸವಿಯ ಕರ್ನಾಟಕ ವೃಕ್ಷ ಸಂರಕ್ಷಣಾ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—**ಪ್ರಸ್ತಾವ ಏನೆಂದರೆ** ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ೧೯೮೭ನೇ ಇಸವಿಯ ಕರ್ನಾಟಕ ವೃಕ್ಷ ಸಂರಕ್ಷಣಾ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.—

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮಂತ್ರಿ ಮಂಸೂದೆಗೆ ಒಪ್ಪಿಗೆ ನೀಡಲಾಯಿತು.

ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಕಾಲಾವಧಿ ಚರ್ಚೆ

ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಶಿಕ್ಷಕರನ್ನು ಹಾಗೂ ಉಪನ್ಯಾಸಕರನ್ನು ಖಾಯಂಗೊಳಿಸುವ ಬಗ್ಗೆ

೭-೩೦ ಪಿ.ಎಂ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗುತ್ತಿಗೆ ಶಿಕ್ಷಕರ ಮತ್ತು ಉಪನ್ಯಾಸಕರ ಜಂಟಿ ಸಮಿತಿಯವರು ನನಗೆ ಒಂದು ಕಾಗದವನ್ನು ಕಳುಹಿಸಿದ್ದಾರೆ. ಅವರು ಉಪವಾಸ ಮಾಡಿ ಮಾಡಿ ಸಾಕಾಗಿದ್ದಾರೆ. ಕಳೆದಸಾರಿ ಅವರು ಉಪವಾಸ ಮಾಡುತ್ತಿದ್ದಾಗ ಮಾನ್ಯ ಮಂಜುನಾಥ್ ರವರು ಎಜುಕೇಷನ್ ಮಿನಿಸ್ಟರ್ ಆಗಿದ್ದರು. ಆಗ ಅವರೂ ಮತ್ತು ನಾವೂ ಹೋಗಿ ಅವರನ್ನು ಭೇಟಿಮಾಡಿ ಎಲ್ಲವನ್ನು ಕೇಳಿ, ನಿಮ್ಮ ಬೇಡಿಕೆಗಳನ್ನು ಕನ್ಸಿಡರ್ ಮಾಡುತ್ತೇವೆಂದು ಹೇಳಿಬಂದಿದ್ದೆವು. ಈಗ ಆ ಸಂಘದವರು ನನಗೆ ಒಂದು ಕಾಗದವನ್ನು ಬರೆದು ಕಳುಹಿಸಿ ಇಷ್ಟು ದಿವಸವಾದರೂ ಆಸೆಂಬ್ಲಿಯಲ್ಲಿ ನಮ್ಮ ವಿಚಾರವನ್ನು ತೆಗೆದುಕೊಳ್ಳಲಿಲ್ಲ, ಈಗ ನಾವು ಜೈಲ್ ಭರೋ ಕಾರ್ಯಕ್ರಮವನ್ನು ನಡೆಸಿ ಜೈಲಿಗೆ ಹೋಗುತ್ತಿದ್ದೇವೆಂದು ತಿಳಿಸಿದ್ದಾರೆ, ಇದನ್ನೆಲ್ಲಾ ನಮ್ಮ ಮಾನ್ಯ ಸದಸ್ಯರಾದ ಬಂಗಾರಪ್ಪನವರೂ ಹೋಗಿ ನೋಡಿಕೊಂಡು ಬಂದಿದ್ದಾರೆ. ಅವರೆಲ್ಲರನ್ನೂ ಪೋಲೀಸರು ವ್ಯಾನ್‌ನಲ್ಲಿ ತುಂಬಿಕೊಂಡು ಜೈಲಿಗೆ ತೆಗೆದುಕೊಂಡು ಹೋಗಿದ್ದಾರೆ. ಆದ್ದರಿಂದ ಸರ್ಕಾರ ಕೂಡಲೇ ಈ ಬಗ್ಗೆ ಗಮನಕೊಡಬೇಕು. ಹಿಂದೆ ಅವರಿಗೆ ಕೊಟ್ಟಿದ್ದ ಭರವಸೆಯಂತೆ ರೋಸ್ಟರ್ ಪ್ರಕಾರವೋ, ಮಾಸಲಾತಿ ಪ್ರಕಾರವೋ ಅಥವಾ ಇನ್ನೂ ಬೇರೆ ಯಾವುದಾದರೂ ರೀತಿಯಲ್ಲಿ ಅವರ ವಿಚಾರವನ್ನು ಪರಿಶೀಲಿಸಿ ಅವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು, ಭೂಪತಿ —ಮಾನ್ಯ ಅಧ್ಯಕ್ಷರೆ, ಈ ವಿಚಾರ ಮೊನ್ನೆಯೇ ಚರ್ಚೆಗೆ ಬರಬೇಕಾಗಿತ್ತು. ಸುಮಾರು ೨ ದಿವಸ ಕಳೆದಮೇಲೆ ಈಗ ಇದು ಚರ್ಚೆಗೆ ಬಂದಿದೆ. ಗುತ್ತಿಗೆ ಆಧಾರದಮೇಲೆ ಕೆಲಸ ಮಾಡತಕ್ಕ ಶಿಕ್ಷಕರು, ಉಪನ್ಯಾಸಕರು ಕಳೆದ ೩ ದಿವಸದಿಂದ ಮುಷ್ಕರ ಮಾಡಿರತಕ್ಕ ವಿಚಾರ ತಮಗೂ ಗೊತ್ತಿದೆ. ೧೦,೪೦೦ ಜನರು ಈ ನಮ್ಮ ಇಡೀ ಕರ್ನಾಟಕ ರಾಜ್ಯದಲ್ಲಿ ೧೯೮೪ನೇ ಇಸವಿಯಿಂದಲೂ

ಸೇವೆ ಸಲ್ಲಿಸಿಂತ್ತಿದ್ದಾರೆ. ಇವರು ತಮ್ಮ ಹಲವಾರು ಬೇಡಿಕೆಗಳನ್ನು ಇಟ್ಟುಕೊಂಡು, ಹಲವಾರು ಸಾರಿ ಹೋರಾಟ ಮಾಡಿದ್ದಾರೆ. ಇದರ ಬಗ್ಗೆ ಹಲವಾರುಸಾರಿ ಈ ಮನೆಯಲ್ಲೇ ಚರ್ಚೆ ಕೂಡ ಆಗಿದೆ ಈಗ ಸಧ್ಯದಲ್ಲಿ ಅವರು ಕಬ್ಬನ್ ಪಾರ್ಕ್‌ನಲ್ಲಿಲ್ಲ, ಅವರೆಲ್ಲರೂ ಜೈಲಿನಲ್ಲಿದ್ದಾರೆ. ಈಗ ಕೇವಲ ಕೆಲವೇ ನಿಮಿಷಗಳ ಹಿಂದೆ ಪೋಲೀಸರು ಇವರನ್ನೆಲ್ಲಾ ತಮ್ಮ ವ್ಯಾನ್‌ನಲ್ಲಿ ತುಂಬಿಕೊಂಡು ಜೈಲಿನಲ್ಲಿ ಹಾಕಿದ್ದಾರೆ ಇದೇ ರೀತಿ ಸೇವೆ ಸಲ್ಲಿಸತಕ್ಕ ಗುತ್ತಿಗೆ ಆಧಾರದಮೇಲೆ ಕೆಲಸಮಾಡತಕ್ಕ ನೌಕರ ವರ್ಗದವರು ಮುಖ್ಯವಾಗಿ ಸರ್ಕಾರಿ ರಾಜ್ಯದಲ್ಲಿ ಇದ್ದಂಥ ನೌಕರರು ಸುಪ್ರೀಂ ಕೋರ್ಟಿಗೆ ಅರ್ಜಿಯನ್ನು ಸಲ್ಲಿಸಿದಾಗ ಸರ್ವೋಚ್ಚ ನ್ಯಾಯಾಲಯವು ಕೊಟ್ಟಂಥ ತೀರ್ಪು ಏನೆಂದರೆ ಈ ರೀತಿ ಗುತ್ತಿಗೆ ಆಧಾರದಮೇಲೆ ತೆಗೆದು ಕೊಳ್ಳತಕ್ಕ ಪದ್ಧತಿ ಏನಿದೆ ಇದು ಸರಿಯಲ್ಲ. ಏಕೆಂದರೆ ಸರ್ಕಾರದಲ್ಲಿ ನೇರವಾಗಿ ನೇಮಕ ಮಾಡಿಕೊಳ್ಳತಕ್ಕ ಪದ್ಧತಿ ಇದ್ದರೂ ಕೂಡ ಇವರನ್ನು ಈ ರೀತಿ ಗುತ್ತಿಗೆ ಆಧಾರದಮೇಲೆ ನೇಮಕ ಮಾಡಿಕೊಂಡಿರತಕ್ಕದ್ದು ತಪ್ಪು. ಇವರನ್ನೆಲ್ಲಾ ಖಾಯಂ ಮಾಡಬೇಕು, ಮತ್ತು ಇನ್ನು ಮುಂದಿನ ವಿಷಯಗಳಿಗೆ ಹರ್ಯಾಣದ ಹೈಕೋರ್ಟ್‌ನವರನ್ನು ಆಪ್ರೋಚ್ ಮಾಡಬಹುದೆಂದು ಅವರು ಹೇಳಿದ್ದಾರೆ. ಕಳೆದಸಾರಿ ಮಾನ್ಯ ರಘುಪತಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆವು ಆಗ ಏನು ಹೇಳಿದರೆಂದರೆ, ಆ ಸುಪ್ರೀಂ ಕೋರ್ಟಿನ ತೀರ್ಪು ನಮಗೆ ಅನ್ವಯಿಸುವುದಿಲ್ಲ ಎಂದು ಹೇಳಿದರು. ಮತ್ತೆ ನಾವು ಒತ್ತಾಯ ಮಾಡಿ ಕೇಳಿದಾಗ, ಈ ಬಗ್ಗೆ ನಮ್ಮ ಕಾನೂನು ಇಲಾಖೆಯವರನ್ನು ಕನ್ಸಲ್ಟ್ ಮಾಡುತ್ತೇವೆಂದು ಹೇಳಿದರು. ಅವರು ಈ ರೀತಿ ಹೇಳಿ ಹೋದಮೇಲೆ ೩ ಜನ ವಿದ್ಯಾಮಂತ್ರಿಗಳಾಗಿ ಚರ್ಚೆಮಾಡಿ ಬಂದುಹೋದರು, ಮಾನ್ಯ ಜೀವರಾಜ ಆಳ್ವರವರ ನಂತರ ಮಾನ್ಯ ಸೋಮಶೇಖರ್ ರವರು ಬಂದಿದ್ದಾರೆ. ಆದರೆ ಈಗ ಸದನದಲ್ಲಿ ಇಬ್ಬರೂ ಇಲ್ಲ.

ಮಾನ್ಯ ಅಧ್ಯಕ್ಷರೇ, ಇದು ಬಹಳ ಅತಿರೇಕವಾಯಿತು. ಶಿಕ್ಷಣ ಇಲಾಖೆಯ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿರುವಾಗ ಸದನದಲ್ಲಿ ಶಿಕ್ಷಣ ಮಂತ್ರಿಗಳು ಇಲ್ಲ ಎಂದರೆ ಹೇಗೆ ?

(ಗೊಂದಲ)

(ಶ್ರೀ ಎಂ. ಎಸ್. ನಾರಾಯಣರಾವ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಛೇರ್ಮನ್.—ತಾವು ಮಾತನಾಡಿ, ಮಂತ್ರಿಗಳು ಬರುತ್ತಾರೆ.

+ ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ನನಗೆ ಬಂದಿರತಕ್ಕ ಮಾಹಿತಿಯ ಪ್ರಕಾರ ಶ್ರೀ ಶಿಕ್ಷಕರನ್ನು ಮಂತ್ರಿಗಳೇ ಅಲ್ಲಿಂದ ಓಡಿಸಿದರು ಎಂದು. ಅವರನ್ನು ಓಡಿಸಿದಂಥ ಮಂತ್ರಿಗಳು ಈಗ ಇಲ್ಲಿರಬೇಕು. ಇವರ ಮರ್ಯಾದೆಯನ್ನು ಉಳಿಸಿಕೊಳ್ಳಬೇಕಾದರೆ ಇಲ್ಲಿರಬೇಕು. ಇವರು ಇಲ್ಲಿ ಇಲ್ಲದಿದ್ದರೆ ಇವರಿಗೆ ಮರ್ಯಾದೆ ಇಲ್ಲವೆಂದು ನಾವು ತೀರ್ಮಾನಕ್ಕೆ ಬರಬೇಕಾಗುತ್ತದೆ.....

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಸದನದಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತೇನೆ ಅವತ್ತೂ ಕೂಡ ನಾನು ಇವರನ್ನು ಖಾಯಂ ಮಾಡುವುದಕ್ಕಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಏನು ಹೇಳುತ್ತಿರೋ ಅದನ್ನು ಹೇಳಿ. ಆದರೆ ಇದಕ್ಕೆ ಸಂಬಂಧಪಟ್ಟಹಾಗೆ ಮಂತ್ರಿಗಳು ಒಬ್ಬರು ಇದ್ದಾರೆ. ಅವರು ನೆನ್ನೆ ದಿವಸ ಅಲ್ಲಿಗೆ ಹೋಗಿದ್ದರು. ಬಡ ಉಪಾಧ್ಯಾಯರನ್ನು ಬಹಳ ಗೊಂದಲಕ್ಕೆ ಸಿಕ್ಕಿಸಿದ್ದಾರೆಂದು ನಮಗೆ ಬಂದಿರತಕ್ಕಂಥ ವರ್ತಮಾನ. ಕಂಡಿತವಾಗಿಯೂ ಅವರು ಮಾತನಾಡಬೇಕು. ಮಾನ್ಯ ರಘುಪತಿಯವರು ಎಷ್ಟೇ ಒಳ್ಳೆಯವರಾಗಿದ್ದರೂ.....

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಭೂಪತಿಯವರು ನನಗೆ ಚುಚ್ಚಿ ಹೇಳಿದ್ದರಿಂದ ನಾನು ಹೇಳಬೇಕಾಗಿದೆ. ಸಂಬಂಧಪಟ್ಟ ಮಂತ್ರಿಗಳು ಕೌನ್ಸಿಲ್‌ನಲ್ಲಿ ಇದ್ದಾರೆ. ಪ್ರತಿಯೊಂದು ಪಾಯಿಂಟ್‌ನ್ನು ನೋಟ್ ಮಾಡಿಕೊಳ್ಳುತ್ತಿದ್ದೇನೆ. ಏತಕ್ಕೆಂದರೆ ನನಗೂ ಅನುಭವ ಇದೆ.

ಶ್ರೀ ಎಂ. ಎಸ್. ಕೃಷ್ಣನ್.— ಎಲ್ಲರಿಗೂ ಅನುಭವ ಇದೆ. ದಯವಿಟ್ಟು ಹೇಳುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಇರಬೇಕು.

ಶ್ರೀ ಯು. ಭೂಪತಿ.—ಸರ್ಕಾರ ಈ ರೀತಿಯಾಗಿ ಬೇಜವಾಬ್ದಾರಿಯನ್ನು ತೋರಿಸಬಾರದು.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಬಗ್ಗೆ ನಮಗೆ ಬಹಳ ಗೌರವವಿದೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಕಳಕಳಿ ಏನೆಂದರೆ ಸಂಬಂಧಪಟ್ಟ ಸಚಿವರು ಇಲ್ಲಿ ಇರಬೇಕೆಂಬುದು.

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೇ ಒಂದು ನಿಮಿಷ. ಮಾನ್ಯ ಭೂಪತಿಯವರು ತಮ್ಮ ಭಾಷಣವನ್ನು ಮುಂದುವರಿಸಲಿ.

ಶ್ರೀ ಯು. ಭೂಪತಿ.—ಒಂದೇ ಇಲಾಖೆಗೆ ಸಂಬಂಧಪಟ್ಟಂತೆ ಇಬ್ಬರು ಮಂತ್ರಿಗಳು ತದ್ವಿರುದ್ಧವಾಗಿ ಹೇಳಿಕೆಯನ್ನು ಕೊಟ್ಟಿರುತ್ತಾರೆ. ಅದಕ್ಕಾಗಿ ಅವರೇ ಇರಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಈಗ ೫ ನಿಮಿಷಗಳ ಕೆಳಗೆ ನಡೆದುದು, ಮಾನ್ಯ ಎಸ್. ಆರ್. ಬೊಮ್ಮಾಯಿಯವರು ಮಾತನಾಡುತ್ತಾ ಏನು ಹೇಳಿದರು ಎಂದರೆ ರೋಸ್ಟರ್ ಫಾಲೋ ಮಾಡಿಲ್ಲ, ಆದ್ದರಿಂದ ಅವರನ್ನು ಖಾಯಂ ಮಾಡುವ ಪ್ರಶ್ನೆ ಬರುವುದಿಲ್ಲವೆಂದು ಹೇಳಿದರು. ಮಾನ್ಯ ಸದಸ್ಯರಾದ ಉಪ್ಪಿನ್‌ರವರು ಪ್ರಶ್ನೆ ಕೇಳಿದಾಗ ಪ್ರಾಥಮಿಕ ಶಿಕ್ಷಣ ಮಂತ್ರಿಗಳಾದ ಮಾನ್ಯ ಸೋಮಶೇಖರ್‌ರವರು ಉತ್ತರ ಕೊಡುತ್ತಾ, ಸರ್ಕಾರ ಈಗಾಗಲೇ ಒಪ್ಪಿಕೊಂಡಿದೆ, ತಾಂತ್ರಿಕ ಅಡೆತಡೆ ಇದೆ ಎಂದು ಹೇಳಿದರು. ನಿಮ್ಮ ಸರ್ಕಾರದಲ್ಲಿ ಒಂದೇ ವಿಚಾರದ ಬಗ್ಗೆ ಎರಡು ಅಭಿಪ್ರಾಯಗಳನ್ನು ಕೊಟ್ಟರೆ ಏನು ಮಾಡುವುದು ? ರೆಕಾರ್ಡ್ ಇದೆ, ಬೇಕಾದರೆ ತೆಗೆದುನೋಡಿ. ಅದಕ್ಕೋಸ್ಕರವಾಗಿ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಇದಿಷ್ಟೇ ಅಲ್ಲ ಇನ್ನೂ ಹಲವಾರು ಬೇಡಿಕೆಗಳು, ವಿಚಾರಗಳು ಇದರಲ್ಲಿ ಇದೆ. ಆದ್ದರಿಂದ ಮಂತ್ರಿಗಳು ಇರಬೇಕೆಂದು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಒಬ್ಬರು ಮಾತನಾಡುವಾಗ ಇನ್ನೊಬ್ಬರು ಮಾತನಾಡುವುದು ಬೇಡವೆಂದು ಮಾನ್ಯ ಸದಸ್ಯರಲ್ಲಿ ಕಳಕಳಿಯಿಂದ ಹೇಳುತ್ತೇನೆ.

ಶ್ರೀ ಯು. ಭೂಪತಿ —ದಯವಿಟ್ಟು ನನಗೆ ಡಿಸ್ಟರ್ಬ್ ಮಾಡಬೇಡಿ. ನಾನು ಏನು ಹೇಳ ಬೇಕೆಂದಿರುವೆನೋ ಅದನ್ನು ಹೇಳಬಾರದೇ ?

(ಗೊಂದಲ)

ಈ ರೀತಿಯಾಗಿ ಹಲವಾರು ಬಾರಿ ಈ ವಿಷಯ ಪ್ರಸ್ತಾಪವಾಗಿದೆ. ಮಾನ್ಯ ಅಧ್ಯಕ್ಷರೇ, ಹಿಂದೆ ಸನ್ಮಾನ್ಯ ನಂಜುಂಡಸ್ವಾಮಿಯವರು ಶಿಕ್ಷಣ ಸಚಿವರಾಗಿದ್ದಾಗಲೂ ಕೂಡ ಈ ವಿಚಾರದಲ್ಲಿ ಚರ್ಚೆ ನಡೆದಿದೆ. ಅದಕ್ಕೆ ಹಲವಾರುಬಾರಿ ಹೀಗೆ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಮಂಜುನಾಥ್‌ರವರು ಉತ್ತರವನ್ನು ಕೊಡುತ್ತಾ ಹೇಳಿರತಕ್ಕಂಥ ಕೆಲವು ಮಾತುಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ರಮೇಶ್ ಕುಮಾರ್.—ಮಾನ್ಯ ಬಸವಲಿಂಗಪ್ಪನವರು ಅಮೆಂಡ್‌ಮೆಂಟ್ ಈ ಮನೆಗೆ ಏನು ತಂದಿದ್ದಾರೆ that is very valid and has far-reaching implications. They have got to reconsider. ರೋಸ್ಟರ್ ಸಿಸ್ಟಮ್‌ನ್ನು ಇಗ್‌ನೋರ್ ಮಾಡಿ ಈ ರೀತಿ ಮಾಡುತ್ತೇವೆಂದು ಹೇಳಿದರೆ social ಅಲ್ಲಿಗೇಷನ್ ನಾವು ಇಲ್ಲಿ ತಳ್ಳಿಹಾಕಿದಂತಾಗುವುದಿಲ್ಲವೇ ?

ಶ್ರೀ ಯು. ಭೂಪತಿ.—ಕೇಳಿ ಮಾನ್ಯ ರಮೇಶ್ ಕುಮಾರ್‌ರವರೇ, ನಿಮ್ಮ ಕಾಳಜಿ ಬಗ್ಗೆ ನಮಗೆ ಮೆಚ್ಚುಗೆ ಇದೆ.

ಹಿಂದಿನ ಶಿಕ್ಷಣ ಸಚಿವರಾಗಿದ್ದ ಮಾನ್ಯ ಮಂಜುನಾಥ್‌ರವರು ಮಾತನಾಡುತ್ತಾ ಏನು ಹೇಳಿದ್ದಾರೆಂದರೆ, 'ಲೋಕಲ್ ಕ್ಯಾಂಡಿಡೇಟ್ಸ್ ಅನ್ನು ರೆಗ್ಯುಲರೈಸ್ ಮಾಡಿದ ಮೇಲೆ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವವರನ್ನು ರೆಗ್ಯುಲರೈಸ್ ಮಾಡುತ್ತೇವೆ. ಅವರನ್ನು ನೇಮಕಾತಿ ಮಾಡುವಾಗ ಮೆರಿಟ್ ಆಧಾರದಮೇಲೆ ಮಾಡಿದ್ದೇವೆ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ಮಾಡಿದ್ದೇವೆ. ಇದು ಸರ್ಕಾರದ ಸಂಬಂಧಪಟ್ಟ ಮಂತ್ರಿಗಳು ಕಳೆದ ಬಾರಿ ಇದೇ ಸದನದಲ್ಲಿ ಕೊಟ್ಟಂತಹ ಹೇಳಿಕೆ. ಆದಾದಮೇಲೆ, 'ಈ ವಿಚಾರವನ್ನು ಮುಂದಿನ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ತಂದು ಏನಾದರೂ ಒಂದು ತೀರ್ಮಾನವನ್ನು ಅಂತಿಮವಾಗಿ ತೆಗೆದುಕೊಳ್ಳುತ್ತೇವೆ ಎಂದು ಈ ಮನೆಯ ಒಳಗೆ ಮತ್ತು ಹೊರಗೆ ಭರವಸೆ ಕೊಟ್ಟಿ

ದ್ದಾರೆ. ಒಂದು ವರ್ಷದ ಮೇಲಾದರೂ ಅದರ ಬಗ್ಗೆ ಯಾವ ವಿಚಾರವನ್ನೂ ಸರ್ಕಾರ ಎತ್ತಲಿಲ್ಲ. ಬಹುಶಃ ಅಲ್ಲಿಂದ ಇಲ್ಲಿಯವರೆಗೆ ಕ್ಯಾಬಿನೆಟ್ ಮೀಟಿಂಗ್ ಆಗಿಲ್ಲವೆಂದು ಕಾಣುತ್ತದೆ.

(ಶ್ರೀ ರಮೇಶ್ ಕುಮಾರ್‌ರವರು ಸ್ವಿಚ್ ಹಾಕದೆ ಮಾತನಾಡಿದರು)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ರಮೇಶ್ ಕುಮಾರ್‌ರವರು ೪೫ ಜನರಲ್ಲಿ ಸೇರಿದ್ದಾರೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲ, ಅವರು ಯಾವಾಗಲೂ ಹಾಗೆ ಸೇರುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಬಂಗಾರಪ್ಪನವರ ಜೊತೆ ಮಾತ್ರ ಸಂಬಂಧ ಎಂದು ಕಾಣುತ್ತದೆ.

ಶ್ರೀ ರಮೇಶ್ ಕುಮಾರ್.—ಡೆಲ್ಲಿಗೆ ನಿಯೋಗ ಹೋದಾಗ ನಾನು ಒಬ್ಬನೆ ಉಳಿದವನು.

ಛೇರ್ಮನ್.—ಈಗ ಆ ವಿಚಾರ ಬೇಡ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನೀವು ಏನು ಬೇಕಾದರೂ ಮಾತನಾಡಿಕೊಳ್ಳಿ. ಅದು ಯಾವುದು ನನಗೆ ಗೊತ್ತಿಲ್ಲ. ಅದು ನನಗೆ ಹೊಸ ವಿಚಾರ.

(ಗೊಂದಲ)

ಛೇರ್ಮನ್.—ವಿಷಯಾಂತರ ಆಗುವುದು ಬೇಡ.

ಶ್ರೀ ಜಿ. ನಾರಾಯಣ ಕುಮಾರ್.—ಮಾಡಿದ್ದನ್ನು ಮಾಡಿಲ್ಲವೆಂದು ಹೇಳುವುದಿಲ್ಲ ನಾವು.

ಛೇರ್ಮನ್.—ಸದಸ್ಯರಲ್ಲಿ ಮನವಿ ಏನೆಂದರೆ, ಆದಷ್ಟು ಬೇಗ ಚರ್ಚೆ ಮುಗಿಸೋಣ. ಚರ್ಚೆಯು ಪುಂಖ್ಯದಲ್ಲಿ ಬೇರೆ ವಿಷಯ ತರುವುದು ಬೇಡ.

ಶ್ರೀ ಯು. ಭೂಪತಿ.—ರೋಸ್ಟರ್ ಪದ್ಧತಿ ಪ್ರಕಾರ ಮೀಸಲಾತಿಯನ್ನು ಅನುಸರಿಸಬೇಕಾಗಿದೆ ಇದನ್ನು ವಿರೋಧ ಮಾಡಬೇಕೆಂಬ ಅಭಿಪ್ರಾಯ ನನ್ನದಲ್ಲ. ರೋಸ್ಟರ್ ಪದ್ಧತಿ ಪ್ರಕಾರ ಮೀಸಲಾತಿ ನಿಯಮವನ್ನು ಕಡ್ಡಾಯವಾಗಿ ನೂರಕ್ಕೆ ನೂರರಷ್ಟು ಪಾಲಿಸಬೇಕು. ಆದರೆ ನಮಗೆ ಗೊತ್ತಾಗಿರುವ ಪ್ರಕಾರ ಗುತ್ತಿಗೆ ಶಿಕ್ಷಕರನ್ನು ನೇಮಿಸುವಾಗ ಮೀಸಲಾತಿ ಪದ್ಧತಿಯನ್ನು ಅನುಸರಿಸಿಲ್ಲ ಎಂಬ ಮಾತನ್ನು ಮಾನ್ಯ ಬೊಮ್ಮಾಯಿಯವರು ಈಗತಾನೇ ಹೇಳಿದರು. ಅದು ಸರಿಯಲ್ಲ. ಇದಕ್ಕೂ ಹಿಂದೆ ಹಲವಾರು ಬಾರಿ ಚರ್ಚೆ ಆದಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ನೇಮಿಸಿದ್ದೇವೆಂದು ಮಂತ್ರಿಗಳು ಈ ಮನೆಯಲ್ಲಿ ಹೇಳಿದ್ದಾರೆ. ಕೆಲವು ವಿಚಾರಗಳಲ್ಲಿ ಕೆಲವು ಸಂದರ್ಭಗಳಲ್ಲಿ ಪಾಲನೆ ಮಾಡಿಲ್ಲ. ಇಂಗ್ಲಿಷ್ ಪ್ರಾಧ್ಯಾಪಕರನ್ನು ನೇಮಿಸುವಾಗ, ಗಣಿತ ಶಾಸ್ತ್ರಗಳಲ್ಲಿ ಪದವಿ ಪಡೆದಂತಹ ಶಿಕ್ಷಕರನ್ನು ನೇಮಿಸುವಾಗ, ಕೆಲವು ಜಿಲ್ಲೆಗಳಲ್ಲಿ ಮಾತ್ರ ಕೆಲವು ಸ್ಥಾನಗಳಿಗೆ ಮಾತ್ರ ಮೀಸಲಾತಿ ಪಾಲನೆ ಮಾಡುವುದಕ್ಕಾಗಿಲ್ಲ. ಕಾರಣ ಆ ಕ್ವಾಲಿಫಿಕೇಷನ್ ಇರತಕ್ಕ ಶಿಕ್ಷಕರೆ ಜೊತೆಗೆ ಇತ್ತು. ಆ ಅರ್ಹತೆ ಇರತಕ್ಕವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಆ ವರ್ಗದಲ್ಲಿ ಸಿಗುತ್ತಿರಲಿಲ್ಲವೆಂದು ಮಾಡಿಕೊಂಡರು. ಮೊನ್ನೆ ಪಿ. ಯು. ಸಿ. ಪರೀಕ್ಷೆ ನಡೆದಾಗ ಪತ್ರಿಕೆಯಲ್ಲಿ ಬಂದಿತು. ಇಂಗ್ಲಿಷ್ ಪತ್ರಿಕೆಯನ್ನು ವ್ಯಾಲ್ಯುಯೇಷನ್ ಮಾಡುವುದಕ್ಕೆ ಶಿಕ್ಷಕರ ಕೊರತೆ ಇದೆ ಎಂದು ಪತ್ರಿಕೆಯಲ್ಲಿ ಮತ್ತು ರೇಡಿಯೋ ಮೂಲಕ ಪ್ರಕಟಣೆ ನೀಡಿದರು. ಆ ಪ್ರಕಾರ ನೇಮಿಸಿಕೊಂಡವರು ಪೇಪರ್ ವ್ಯಾಲ್ಯುಯೇಷನ್ ಮಾಡಿ ನೂರಕ್ಕೆ ೯೨ ಅಂಕಗಳನ್ನು ಹಾಕಿದ. ಅವನು ಇಂಗಿಷ್ ಶಿಕ್ಷಕ ಅಲ್ಲ. ಆ ಮೇಲೆ ಶಿಕ್ಷಕ ಎಲ್ಲಿದ್ದಾನೆಂದು ಪೋಲೀಸರು ಹುಡುಕಾಡಿದರೂ ಸಿಗಲಿಲ್ಲ. ಈ ರೀತಿ ಪರಿಸ್ಥಿತಿ ಶಿಕ್ಷಣ ಇಲಾಖೆಯಲ್ಲಿ ಮೊದಲಿನಿಂದ ಇದೆ. ಆದಕಾರಣ ಕೆಲವು ಸ್ಥಾನಗಳಿಗೆ ಕೆಲವು ವಿಚಾರಗಳಲ್ಲಿ ಮೀಸಲಾತಿ ಪದ್ಧತಿಯನ್ನು ಫಾಲೋ ಮಾಡಿಲ್ಲ. ೯೮ ಪರ್ಸೆಂಟ್ ರೋಸ್ಟರ್ ಸಿಸ್ಟಂ ಅನ್ನು ಫಾಲೋ ಮಾಡಿದ್ದಾರೆ. ಎಲ್ಲಿ ರೋಸ್ಟರ್ ಸಿಸ್ಟಮನ್ನು ಶೇಕಡವಾರು ಪಾಲನೆ ಮಾಡುವುದಕ್ಕೆ ಆಗಿಲ್ಲ ಅದನ್ನು ಸರಿ ಮಾಡುವುದಕ್ಕೆ ನಿಯಮಾವಳಿ ಬದಲಾವಣೆ ಮಾಡಬೇಕಾದರೆ ಮಾಡಿ. ಅಥವಾ ಅವಕಾಶ ಇದ್ದರೆ ತುಂಬಿ ಖಾಯಂ ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡಿದರೆ ಸಾಧ್ಯವಾಗುತ್ತದೆ. ಇದು ದೊಡ್ಡ ಪ್ರಶ್ನೆಯಲ್ಲ. ಸರ್ಕಾರ ಮತ್ತೊಮ್ಮೆ

ಯೋಚನೆ ಮಾಡಲಿ. ಕೋರ್ಟ್ ಬಗ್ಗೆ ಸರ್ಕಾರ ಹೇಳಬಹುದು ಎಂದು ಭಾವಿಸಿದ್ದೇನೆ. ಕೆಲವು ಪಿಟಿಷನ್‌ಗಳು ಪೆಂಡಿಂಗ್ ಇವೆ, ಅದು ಆಗದೆ ಹೊರತು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಬಹುದು. ಅದು ನೆಪ ಮಾತ್ರ. ಸರ್ಕಾರ ಮನಸ್ಸು ಮಾಡಿ ಆವುಗಳನ್ನು ಖಾಯಂ ಮಾಡ ಬೇಕೆಂದು ನಿರ್ಣಯ ಮಾಡಿದರೆ ಕೋರ್ಟ್‌ನಲ್ಲಿರತಕ್ಕ ಯಾವುದೇ ಪ್ರಕರಣಗಳೂ ನಿಮ್ಮ ನಿಯಮಕ್ಕೆ ಅಡ್ಡಿ ಬರುವುದಿಲ್ಲ. ಲೀಗಲ್ ಎಕ್ಸ್‌ಪರ್ಟನ್ನು ಕನ್‌ಸಲ್ಟ್ ಮಾಡಿ ನೋಡಿ. ಬಹಳ ಜನ ಅಡ್ಡಿ ಬರುವುದಿಲ್ಲ ಎಂದು ಹೇಳಿದ್ದಾರೆ, ಇಲಾಖಾಧಿಕಾರಿಗಳು ನನ್ನ ಮುಂದೆ ಅಡ್ಡ ಬರುವುದಿಲ್ಲ ಎಂದು ಹೇಳಿದ್ದಾರೆ. ನಾನು ಅವರ ಹೆಸರು ಹೇಳುವುದಿಲ್ಲ. ಅವರ ಹೆಸರು ಹೇಳುವುದು ಪ್ರಸ್ತುತ ಅಲ್ಲ. ಫೈನಾನ್ಷಿಯಲ್ ಇಂಪ್ಲಿಕೇಷನ್ಸ್ ಆಗಬಹುದು ಎಂದು ಹಠಮಾರಿತನ ಮಾಡಿ ಖಾಯಂ ಮಾಡುವುದಕ್ಕಾಗುವುದಿಲ್ಲ ಎಂದು ತಳ್ಳಿಹಾಕಿದರೆ ಸರಿಯಲ್ಲ. ಇದರಲ್ಲಿ ಮಾನವೀಯತೆಯ ಪ್ರಶ್ನೆ ಬರುತ್ತದೆ. ಆದ್ದರಿಂದ ಆ ರೀತಿಯ ಉತ್ತರವನ್ನು ಸರ್ಕಾರದವರು ಕೊಡಬಾರದು, ಪಾಸಿಟೀವಾಗಿ ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಾಂಟ್ರಾಕ್ಟ್ ಪದ್ಧತಿಯಲ್ಲಿ ನೇಮಕ ಮಾಡಿಕೊಳ್ಳುವಾಗ ಒಂದು ಕಂಡೀಷನ್ ಇದೆ. ಅದರ ಪ್ರಕಾರ ಮೂಲ ವೇತನದಲ್ಲಿ ೧೦ ರೂಪಾಯಿ ವ್ಯತ್ಯಾಸವಿರುವ ವೇತನ ಕೊಡಬೇಕೆಂದು ಇದೆ. ಹೊಸದಾಗಿ ವೇತನ ಆಯೋಗದ ವರದಿ ಬಂದಮೇಲೆ, ಪರಿಷ್ಕರಣ ಆದಮೇಲೆ ಹೊಸ ಮೂಲ ವೇತನಕ್ಕೆ ೧೦ ರೂಪಾಯಿ ವ್ಯತ್ಯಾಸವಿರುವ ವೇತನವನ್ನು ಗುತ್ತಿಗೆ ಶಿಕ್ಷಕರಿಗೆ ಮತ್ತು ಉಪನ್ಯಾಸಕರಿಗೆ ಕೊಟ್ಟಿಲ್ಲ. ಇಷ್ಟು ದಿವಸ ಪರಿಸ್ಥಿತಿ ಬೇರೆ ಇತ್ತು. ಮುಂಜಿ ಶಿಕ್ಷಕರನ್ನು ನೇಮಕ ಮಾಡಿಕೊಂಡರೂ ರಜಾ ಬಂದಾಗ ಸಂಬಳ ಕೊಡುತ್ತಿರಲಿಲ್ಲ. ಈಗ ರಜಾ ದಿವಸಕ್ಕೂ ಸಂಬಳ ಕೊಡುತ್ತಿದ್ದಾರೆ. ಅವರು ಪ್ರತಿವರ್ಷ ರೆಗ್ಯುಲರ್ ಟೀಚರ್ ತರಹವೇ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಪ್ರಶ್ನೆ ಏನೆಂದರೆ ಸರ್ವೀಸ್ ಗ್ಯಾರಂಟಿ ಇಲ್ಲ. ಈಗ ಸರ್ಕಾರ ಹೊಸದಾಗಿ ರೆಕ್ರೂಟ್‌ಮೆಂಟ್ ಮಾಡುವುದಕ್ಕೆ ಆರ್ಡರ್ ಮಾಡಿದೆ. ಮಾನ್ಯ ಮಂತ್ರಿಗಳಾದ ಸೋವಶೇಖರ್ ಅವರು ಹೇಳಿದ ಪ್ರಕಾರ ಗುತ್ತಿಗೆ ಆಧಾರದ ಮೇಲೆ ಇರತಕ್ಕ ಶಿಕ್ಷಕರು ಮತ್ತು ಉಪನ್ಯಾಸಕರ ಸ್ಥಾನದಲ್ಲಿ ತುಂಬುವುದಿಲ್ಲ, ಇದು ಬಿಟ್ಟು ಬೇರೆ ಖಾಲಿ ಇರತಕ್ಕ ಹುದ್ದೆಗಳನ್ನು ತುಂಬುತ್ತೇವೆ ಎಂದು ಹೇಳಿದ್ದಾರೆ. ಇದೆಲ್ಲಾ ಸಂದರ್ಭಗಳನ್ನು, ಹಿಂದೆ ನಡೆದಿರತಕ್ಕ ನತವಳಿಕೆಗಳನ್ನು ಮತ್ತು ಆಶ್ವಾಸನೆಗಳನ್ನು ಗಮನದಲ್ಲಿಟ್ಟುಕೊಂಡು ೧೧,೪೦೦ ಜನರನ್ನು ಖಾಯಂ ಮಾಡಿದರೆ ಶಿಕ್ಷಕರ ಸಮೂಹಕ್ಕೆ ನ್ಯಾಯ ಮಾಡಿದಂತಾಗುತ್ತದೆ ಮತ್ತು ವಿದ್ಯಾರ್ಥಿ ಸಮೂಹಕ್ಕೂ ಪರಿಹಾರ ದೊರೆತಂತಾಗುತ್ತದೆ. ಶಿಕ್ಷಕರಿಗೆ ಹಲವಾರು ಸಮಸ್ಯೆಗಳಿದ್ದರೆ ಇದರ ಬಗ್ಗೆ ಅವರು ಯೋಚನೆ ಮಾಡುತ್ತಾ ಇರುತ್ತಾರೆ. ಶಿಕ್ಷಣ ವೃತ್ತಿಯಲ್ಲಿ ಮನಸ್ಸು ಕಾನ್‌ಸೆಂಟ್ರೇಟ್ ಮಾಡುವುದಕ್ಕಾಗುವುದಿಲ್ಲ. ತನ್ನ ಕರ್ತವ್ಯವನ್ನು ಪಾಲನೆ ಮಾಡುವುದಕ್ಕೆ ತನ್ನ ಸಮಸ್ಯೆಗಳು ಅಡ್ಡ ಬರುತ್ತವೆ. ಆದ್ದರಿಂದ ಅವರ ಮಾನಸಿಕ ಹಿಂಸೆಯನ್ನು ತಪ್ಪಿಸಬೇಕು. ಸಾವಿರಾರು ಜನ ಬೆಂಗಳೂರಿನಲ್ಲಿ ಟೆಂಟ್ ಹಾಕಿಕೊಂಡು ಮೂರು ದಿವಸದಿಂದ ಏನು ಮುಷ್ಕರ ಹೂಡಿದ್ದಾರೆ ಅವರಿಗೆ ಸರಿಯಾದ ಆಶ್ವಾಸನೆ ಕೊಟ್ಟು ಖಾಯಂ ಮಾಡುತ್ತೇವೆಂದು ಹೇಳಿ. ಒಂದು ವೇಳೆ ತಾಂತ್ರಿಕ ಅಡಚಣೆ ಇದ್ದರೆ ಈ ಮನೆಗೆ ತಿಳಿಸಿ. ಅದರಲ್ಲಿ ನಿಗೂಢ ರಹಸ್ಯ ಇಲ್ಲ. ರಶೀದ್ ಅವರ ಸಾವಿನ ಪ್ರಕರಣದಲ್ಲಿ ನಿಗೂಢ ರಹಸ್ಯ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅಂಥದ್ದು ಇದರಲ್ಲಿ ಏನೂ ಇಲ್ಲ. ಕಾನೂನು ತೊಡಕಿದ್ದರೆ ಅದನ್ನು ಹೇಳಿ ನಮಗೂ ಗೊತ್ತಾಗಲಿ. ಶಿಕ್ಷಕರಿಗೂ ಗೊತ್ತಾಗಲಿ. ಎಲ್ಲರಿಗೂ ಗೊತ್ತಾಗಲಿ ಒಟ್ಟಿನಲ್ಲಿ ಅವರನ್ನು ಖಾಯಂ ಮಾಡಬೇಕೆಂದು ಮತ್ತೊಮ್ಮೆ ಸರ್ಕಾರವನ್ನು ಒತ್ತಾಯ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ. – ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ವಿವರಗಳನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಭೂಪತಿಯವರು ಕೊಟ್ಟಿದ್ದಾರೆ. ಇದೇ ಸದನದಲ್ಲಿ ಈ ಬಗ್ಗೆ ವಿಷಯವನ್ನು ಎತ್ತಿದಾಗ ಯಾವ ರೀತಿಯ ಚರ್ಚೆಯಾಗಿದೆ, ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವಂತಹ ಶಿಕ್ಷಕರ ಬಗ್ಗೆ ಸರ್ಕಾರ ಯಾವ ರೀತಿಯಾಗಿರತಕ್ಕ ಉತ್ತರಗಳನ್ನು ಕೊಟ್ಟಿದ್ದಾರೆಂಬುವರ ವಿವರಗಳನ್ನೂ ಕೂಡ ಅವರು ಹೇಳಿದ್ದಾರೆ. ಇಲ್ಲಿ ನಾವು ಮುಖ್ಯವಾಗಿ ೨–೩ ವಿಷಯಗಳನ್ನು ಮಾತ್ರ ಗಮನಿಸಬೇಕು. ಯಾರು ಗುತ್ತಿಗೆ ಆಧಾರದ ಮೇಲೆ ಅಥವಾ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ, ಅವರ ಬಗ್ಗೆ ಸರ್ಕಾರ ನೀತಿ ಪ್ರಶ್ನೆಯಾಗಿ ತೆಗೆದುಕೊಂಡು ಇದನ್ನು ತೀರ್ಮಾನ ಮಾಡತಕ್ಕ ವಿಚಾರ ಇದರಲ್ಲಿ ಅಡಕವಾಗಿದೆ. ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಹಾಗೆ ಬಂದು

ಬಿಲ್ಲನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳಲಾಗುವುದೆಂದು ತಿಳಿಸಿದ್ದೇವೆ. ಅದು ಈಗಾಗಲೇ ವಿಧಾನ ಪರಿಷತ್ತಿನ ಒಪ್ಪಿಗೆಯನ್ನು ಪಡೆದಿದೆ, ಅದು ಕೋರ್ಟಿಗೆ ಹೋಗಿತ್ತು. ಆ ಬಗ್ಗೆ ತೀರ್ಪು ಕೂಡ ಬಂತು. ಕಂಪಲ್ಸರಿಯಾಗಿ ರೆಗ್ಯುಲರೈಸ್ ಮಾಡಬೇಕಾಗಿದೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದಾಗ, ನಾವು ಪೂರ್ವಭಾವಿಯಾಗಿಯೇ ಆಕ್ಷೇಪಣೆಯನ್ನು ಎತ್ತಿದ್ದೆ. ಅದು ಏನೆಂದರೆ ರೂಸ್ಟರ್ ಸಿಸ್ಟಂ ಎನ್ನುತಕ್ಕಂತದ್ದು ಏನು ಇದೆ, ಅದಕ್ಕೆ ಒಳಪಟ್ಟು ಆ ಷರತ್ತಿಗೆ ಒಳಪಟ್ಟಿದ್ದೇ ಆದರೆ ಒಂದು ನಿಮಿಷದಲ್ಲಿ ಪಾಸ್ ಮಾಡಿ ಕೊಡುತ್ತೇವೆ ಎನ್ನುವ ಮಾತನ್ನು ತಿಳಿಸಿದ್ದೇವೆ. ಇದೊಂದು ನೀತಿ ಪ್ರಶ್ನೆ. ದಿನಗೂಲಿ ಆಧಾರದ ಮೇಲೆ ಕೆಲಸ ಮಾಡತಕ್ಕಂತಹವರು ಲೋಕೋಪಯೋಗಿ ಇಲಾಖೆಯಲ್ಲಿದ್ದಾರೆ. ಅದೇ ರೀತಿ ರೇಷ್ಮೆ ಇಲಾಖೆಯಲ್ಲಿದ್ದಾರೆ. ತೋಟಗಾರಿಕೆ ಇಲಾಖೆಯಲ್ಲೂ ಇದ್ದಾರೆ. ನಾನು ಲೋಕೋಪಯೋಗಿ ಮಂತ್ರಿಯಾಗಿದ್ದಾಗ ಇಂತಹ ವಿಷಯದ ಬಗ್ಗೆ ಚರ್ಚೆಗೆ ಬಂದಿದ್ದಾಗ ಒಂದು ಮಾತನಾಡಿದ್ದೇನೆ. ಅದೇನೆಂದರೆ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡತಕ್ಕಂತವರು ಬಹುತೇಕ ಹರಿಜನ–ಗಿರಿಜನರು ಹಾಗೂ ಹಿಂದುಳಿದ ವರ್ಗದವರೇ ಹೆಚ್ಚಾಗಿ ಇರುತ್ತಾರೆ. ಇವರು ಬಡವರಾಗಿದ್ದು, ಇವರನ್ನು ಕಾಯಂ ಮಾಡತಕ್ಕ ವಿಚಾರ ಬಂದಾಗ ಕೂಡ ನೀತಿ ಪ್ರಶ್ನೆ ಬರುತ್ತದೆ. ಉಚ್ಚ ಶಿಕ್ಷಣ ಮಟ್ಟದಲ್ಲಿ ಅಂದರೆ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡತಕ್ಕಂತಹವರು ಇರಬೇಕು. ಅವರು ಲೆಕ್ಚರರ್ ಆಗಿ ಕೆಲಸ ಮಾಡತಕ್ಕಂತಹವರು ಇರಬಹುದು. ಅಥವಾ ಯಾವುದೇ ಇಲಾಖೆಯಲ್ಲಿ ಅಧಿಕಾರ ವರ್ಗದವರು ಅಂದರೆ ಆಫಿಸಿಯಲ್ ಕೇಡರ್‌ನಲ್ಲಿ ಕೆಲಸ ಮಾಡತಕ್ಕಂತಹವರು ಇರಬಹುದು, ಅವರನ್ನು ನಾವು ಖಾಯಂ ಮಾಡತಕ್ಕ ಪ್ರಶ್ನೆ ಬಂದಾಗ ಕೂಡ ನೀತಿ ಪ್ರಶ್ನೆಯನ್ನು ಇಟ್ಟುಕೊಳ್ಳಬೇಕು. ಅಂದರೆ ರೋಸ್ಟರ್ ಸಿಸ್ಟಂನ್ನು ಅನುಸರಿಸಬೇಕು. ಇದರಲ್ಲಿ ಕೂಡ ರೋಸ್ಟರ್ ಸಿಸ್ಟಂನ್ನು ಅನ್ವಯ ಮಾಡುವುದಾದರೆ, ನಮ್ಮದೇನೂ ತಕರಾರು ಇಲ್ಲ ಎಂದು ಮೊದಲೇ ಹೇಳಿದ್ದೇವೆ. ಸಮಾಜದಲ್ಲಿರತಕ್ಕ ಎಲ್ಲಾ ವರ್ಗಗಳಿಗೂ ಸಮಾನವಾಗಿರತಕ್ಕ ಪ್ರಾತಿನಿಧ್ಯವನ್ನು, ಸರ್ಕಾರಿ ಸೇವೆಯಲ್ಲಿ ಕೆಲಸ ಮಾಡತಕ್ಕ ಸಂದರ್ಭ ಬಂದಾಗಲೂ ಕೊಡಬೇಕೆಂಬ ನೀತಿಯನ್ನು ಮೊದಲೇ ಒಪ್ಪಿಕೊಂಡಿದ್ದೇವೆ. ಅದನ್ನು ಪ್ರತಿಪಾದನೆ ಮಾಡಿಕೊಂಡೇ ಬಂದಿದ್ದೇವೆ. ಮೊಟ್ಟಮೊದಲನೆಯದಾಗಿ, ಈ ಒಂದು ನೀತಿಯನ್ನು ಶ್ರೀಮಾನ್ ದೇವರಾಜ್ ಅರಸ್‌ರವರು ಸರ್ಕಾರ ಇದ್ದಾಗ ಆಚರಣೆಗೆ ತಂದಿದ್ದೇವೆ. ಮೊಟ್ಟಮೊದಲನೆಯದಾಗಿ ನೀವು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ನೀವೂ ಕೂಡ ಹೇಳಿದ್ದೀರಿ. ಶ್ರೀಮಾನ್ ಬೊಮ್ಮಾಯಿಯವರೂ ಕೂಡ ಆ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. ಸರ್ಕಾರದ ಪರವಾಗಿ ಹೇಳಿಕೆಯನ್ನು ಕೊಡತಕ್ಕ ಸಂದರ್ಭ ಬಂದಾಗ ಶ್ರೀಮಾನ್ ಲಕ್ಷ್ಮೀಸಾಗರ್‌ರವರೂ ಕೂಡ ಹೇಳಿದ್ದಾರೆ. ರೋಸ್ಟರ್ ಸಿಸ್ಟಂ ಏನಿದೆ, ಅದನ್ನು ಮೂಲಭೂತವಾಗಿ ಒಪ್ಪಿದ್ದೇವೆ, ಅದನ್ನು ಜಾರಿಗೆ ಕೊಡುತ್ತೇವೆಂದು ಹೇಳಿದ್ದೀರಿ. ಪ್ರತಿಯೊಂದು ಇಲಾಖೆ ಇರಬಹುದು. ಆಥವಾ ಆಟಾನಮಸ್ ಬಾಡಿ ಅಂತ ಕೂಡ ಇರಬಹುದು ವಿಶ್ವವಿದ್ಯಾನಿಲಯಗಳ ಆಕ್ಟ್‌ನ್ನು ತೆಗೆದುಕೊಂಡರೆ ಅಲ್ಲಿ ಸರಿಯಾಗಿ ಕೆಲಸ ಕಾರ್ಯ ನಡೆಯುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡತಕ್ಕ ಸೂಪರ್‌ವೈಸರಿ ವಿವರವನ್ನೂ ಕೂಡ ನಾವು ಇಟ್ಟುಕೊಂಡಿದ್ದೇನೆ. ಸಾಮಾನ್ಯವಾಗಿ ಅಲ್ಲಿರುವಂತಹ ಉಪಕುಲಪತಿಗಳು ಒಂದು ಕೋಮಿಗೆ ಸೇರಿದವರಾಗಿದ್ದು ಅಲ್ಲಿನ ಪ್ರೊಫೆಸರ್, ಲೆಕ್ಚರರ್ಸ್ ನಿಂದ ಹಿಡಿದು ಕಸ ಗುಡಿಸುವವರೆಗೂ ಅವರ ಜಾತಿಯವರನ್ನು ನೇಮಕ ಮಾಡುತ್ತಾ ಹೋದರೆ ಏನು ಮಾಡುವುದು ಎಂಬ ಕಾರಣಕ್ಕಾಗಿ ಸರ್ಕಾರ ಸೂಪರ್‌ವೈಸರಿ ಪವರ್ಸ್ ಅನ್ನು ಇಟ್ಟುಕೊಂಡಿದೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ರೋಸ್ಟರ್ ಸಿಸ್ಟಂ ಅನ್ವಯವಾಗಬೇಕು. ಅಡಿಯಿಂದ ಮುಡಿಯವರೆಗೆ ಇರಬೇಕು. ನಾಳೆ ತೆಗೆದುಕೊಳ್ಳತಕ್ಕಂತಹ ಬಿಲ್ಲು ಏನಿದೆ, ಅದಕ್ಕೆ ಪೂರ್ವಭಾವಿಯಾಗಿ ನಮ್ಮದೊಂದು ಷರತ್ತು. ನಾಳೆ ಶ್ರೀಮಾನ್ ಸೋಮಶೇಖರ್ ರವರೇ ಪೈಲಟ್ ಮಾಡಬಹುದು. ಅವರೂ ಕೂಡ ಆ ನೀತಿಯನ್ನು ಅನುಸರಿಸಬೇಕು ಅವರಿಗೆ ಸಂಬಳ ಇಲ್ಲ, ತೊಂದರೆಯಲ್ಲಿದ್ದಾರೆಂದರೆ ಮೊದಲು ಇರಲಿಲ್ಲವೇ? ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರತಕ್ಕ ೧೦,೪೦೦ ಜನ ಶಿಕ್ಷಕರು ಅನೇಕ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಹಾಗೂ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುವವರು ಇದ್ದಾರೆ. ಮದುವೆಯಾದ ಮೇಲೆ ಮಕ್ಕಳು ಆಟೋಮ್ಯಾಟಿಕ್ಕಾಗಿ ಹುಟ್ಟುತ್ತವೆ. ಆದುದರಿಂದ ಮದುವೆಯಾದ ಮೇಲೆ, ಮಕ್ಕಳು ಎಂದು ಬಿತ್ತುಕೊಟ್ಟು ಹೇಳುವ ಅವಶ್ಯಕತೆ ಇಲ್ಲ. ಒಟ್ಟಿನಲ್ಲಿ ಮದುವೆಯಾದ ಮೇಲೆ ಸಂಸಾರದ ಗಾತ್ರ ದೊಡ್ಡದಾಗುತ್ತದೆ. ಮದುವೆ ಮಕ್ಕಳಾದ ಮೇಲೆ ತಾಪತ್ರಯದ ಗಾತ್ರವೂ ಹೆಚ್ಚಾಗುತ್ತದೆ.

ಕಳೆದ ಬಾರಿ ಈ ಗಂತ್ತಿಗೆ ಶಿಕ್ಷಕರ ವಿಚಾರ ಇದೇ ಸದನದಲ್ಲಿ ಪ್ರಸ್ತಾಪಕ್ಕೆ ಬಂದಿತ್ತು. ಶಿಕ್ಷಕರ ತೊಂದರೆಗಳ ಬಗ್ಗೆ ನಾವು ಹೇಳಿದ್ದೆವು. ರಜಾ ಮುಗಿದ ತಕ್ಷಣ ಅವರನ್ನು ತೆಗೆದುಹಾಕುವುದು, ಮತ್ತೆ ಅವರನ್ನು ಸೇರಿಸಿಕೊಳ್ಳುವುದು ಸರಿಯಲ್ಲವೆಂದು ಹೇಳಿದ್ದೆವು ಅದಕ್ಕೆ ಎಲ್ಲಾ, ಇಲ್ಲಾ, ಅವನ್ನು ಮುಂದುವರಿಸೋಣ ಎಂದು ಹೇಳಿದ್ದರು. ೧೮೯ ಜನರನ್ನು ತೆಗೆದುಹಾಕತಕ್ಕ ಒಂದು ಟರ್ಮಿನೇಷನ್ ನೋಟೀಸ್ ಕೂಡ ಆಗ ಕೊಟ್ಟಿದ್ದರು. ಆಗ ಅವರನ್ನು ತೆಗೆದುಹಾಕುವುದಿಲ್ಲವೆಂದು ಹೇಳಿದ್ದರು. ಅವರು ಆ ಕೆಲಸಕ್ಕೆ ನಾಲಾಯಕ್ಕೆಂದರೆ ಬೇಕಾದರೆ ತೆಗೆದುಬಿಡಿ ಎಂದಿದ್ದಕ್ಕೆ, ಇಲ್ಲಾ ಇಲ್ಲಾ ಎಕ್ಸ್‌ಪರ್ಟ್ಸ್ ಎಂದು ಹೇಳಿ ಅವರು ಬೇಕು ಎಂದು ಹೇಳಿದಿರಿ. ಪಾಠ ಮಾಡುವುದರಲ್ಲಿ ನುರಿತ ವರನ್ನು ತೆಗೆದು ಮತ್ತೆ ತೆಗೆದುಕೊಳ್ಳುವುದು ಏಕೆ ? ಎಕ್ಸ್.ವೈ.ಜಡ್. ತೆಗೆದು ಎ.ಬಿ.ಸಿ. ತರುವುದು ಏಕೆ ? ಆಗೆ ನಾವು ಕಷ್ಟಪಟ್ಟು ಸರ್ಕಾರದಿಂದ ಉತ್ತರ ಪಡೆದೆವು. ೧೮೯ ಜನರನ್ನು ನಾವು ಟರ್ಮಿನೇಟ್ ಮಾಡುವುದಿಲ್ಲ ಅವರನ್ನು ಮುಂದುವರೆಸುತ್ತೇವೆಂದು ಹೇಳಿ ಅವರನ್ನು ಆಗ ಮುಂದುವರಿಸಿದರು. ರಜಾ ವಿಚಾರದಲ್ಲೂ ಕೂಡಾ ಇಲ್ಲಾ, ಇಲ್ಲಾ ಮುಂದುವರೆಸುತ್ತೇವೆಂದು ಹೇಳಿದರು. ಹಿಂದೆ ಹೇಳಿದ್ದೆಲ್ಲಾ ದಾಖಲೆಯಲ್ಲಿ ಇದೆ. ಮಾನ್ಯ ಭೂಪತಿಯವರು ಈ ಬಗ್ಗೆ ವಿವರವಾಗಿ ಹೇಳಿದ್ದಾರೆ. ವಿರೋಧ ಪಕ್ಷಗಳು ಈ ಬಗ್ಗೆ ಎಷ್ಟು ಗಮನಹರಿಸಿವೆಯೋ ಅಷ್ಟೇ ಗಮನ ಸರ್ಕಾರಕ್ಕೂ ಕೊಡಾ ಇದೆ ಎಂದು ಆಗ ಹೇಳಿದ್ದರು. ತಕ್ಷಣ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೆವೆಂದು ಆಗ ಹೇಳಿದ್ದರು. ಆಗ ನಾವು ೧೫ ದಿವಸ ಬೇಕಾದರೂ ಕಾಲಾವಕಾಶ ತೆಗೆದುಕೊಳ್ಳಿ. ೧ ತಿಂಗಳು ತೆಗೆದುಕೊಳ್ಳಿ, ೨ ತಿಂಗಳು ತೆಗೆದುಕೊಳ್ಳಿ, ಒಟ್ಟಿನಲ್ಲಿ ಇವರಿಗೆ ಒಳ್ಳೆಯದು ಮಾಡಿ ಎಂದು ಹೇಳಿದ್ದೆವು. ಇಲ್ಲ, ಸುಮಾರಾಗಿ ಎಲ್ಲಾ ಹಂತ ಮುಗಿದಿದೆ, ಅಂತಿಮವಾಗಿ ಮಂತ್ರಿಮಂಡಲದ ಸಭೆಯಲ್ಲಿ ಇಟ್ಟು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೆವೆಂದು ಹೇಳಿದ್ದರು. ಮುಂದಿನ ಮಂತ್ರಿಮಂಡಲ ಸಭೆ ಯಾವಾಗ ಕೂಡುತ್ತದೆ ಎಂದು ನಾವು ಆಗ ಪ್ರಶ್ನೆ ಕೇಳುವುದಕ್ಕೆ ಹೋಗಲಿಲ್ಲ. ಸಾಮಾನ್ಯವಾಗಿ ೧ ವಾರಕ್ಕೆ, ೧೦ ದಿನಕ್ಕೆ, ೧೫ ದಿನಕ್ಕೆ ಒಂದು ಸಾರಿ ಮಂತ್ರಿಮಂಡಲದ ಸಭೆ ಸೇರುವ ವಾಡಿಕೆ ಇದೆ. ಮುಖ್ಯಮಂತ್ರಿಗಳು ಏನಾದರೂ ಹೆಚ್ಚು ಕಾಲ ಹೊರದೇಶ ಪ್ರಯಾಣ ಹೋದರೆ ಹಿರಿಯ ಮಂತ್ರಿಗಳಿಗೆ ಕೆಲಸ ವಹಿಸಿ ಹೋಗುತ್ತಾರೆ. ಆಗ ಮುಂದಿನ ವಾರ ಮಂತ್ರಿಮಂಡಲದ ಸಭೆ ಇರುವುದರಿಂದ ಅಲ್ಲಿ ಈ ವಿಷಯವನ್ನು ಇಟ್ಟು ತೀರ್ಮಾನ ತೆಗೆದುಕೊಳ್ಳುವುದಾಗಿ ಅಂದು ಶಿಕ್ಷಣ ಮಂತ್ರಿಗಳಾಗಿದ್ದ ಶ್ರೀ ಪಂಜುನಾಥ್ ಆವರು ಅದೇ ಸ್ಥಾನದಲ್ಲಿ ಕುಳಿತು ಹೇಳಿದ್ದರು. ಆಗ ನಾವು ಏನು ಮಾಡಿದೆವು ? ಧರಣಿ ಕುಳಿತಿದ್ದವರ ಬಳಿ ಹೋಗಿ, ಸರ್ಕಾರಕ್ಕೆ ಈ ಬಗ್ಗೆ ಕಾಲಾವಕಾಶ ಬೇಕಾಗಂತ್ತದೆ, ಕಡೆಂರೆ ಮೇಲೆ ಕೂತರೆ ಆಗಂವ್ದದಿಲ್ಲ ಮುಂದಿನ ಮಂತ್ರಿಮಂಡಲ ಸಭೆಯಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತಿದ್ದಾರೆ, ರೋಸ್ಟರ್ ಸಿಸ್ಟಮ್‌ನ ಪರತ್ತಿಗೆ ಒಳಪಟ್ಟು ತೀರ್ಮಾನ ತೆಗೆದುಕೊಳ್ಳುತ್ತಾರೆಂದು ನಾವು ಹೇಳಿದೆವು. ನಾವು ರೋಸ್ಟರ್ ಸಿಸ್ಟಮ್ ನೋಡೀ ಖಾಯಂ ಮಾಡಬೇಕೆಂದಿದ್ದೇವೆಯೇ ಹೊರತು ಅದನ್ನು ಬಿಟ್ಟು ಇವರಿಗೆ ಅನುಕೂಲ ಮಾಡಿ ಎಂದು ನಾವು ಎಂದೂ ಹೇಳಿಲ್ಲ. ನಾವು ಆ ಮಾತನ್ನು ಬದಲಾವಣೆ ಮಾಡುವುದಕ್ಕೆ ಹೋಗುವುದಿಲ್ಲ.

೭–೦೦ ಪಿ.ಎಂ.

ಒಂದು ಸಾರಿ ಒಂದು ನೀತಿ ಪ್ರಶ್ನೆ ಇಟ್ಟುಕೊಂಡರೆ ಅದಕ್ಕೆ ಅಂಟಿಕೊಳ್ಳಬೇಕಾಗುತ್ತದೆ ಅದಕ್ಕೆ ನಾವು ಅಂಟಿಕೊಂಡಿದ್ದೇವೆ ಬರೀ ಭಾಷಣ ಮಾಡಿದರೆ ಆಗದವುದಿಲ್ಲ. ರೋಸ್ಟರ್ ಸಿಸ್ಟಂ ವಿಚಾರದಲ್ಲಿ ನೀವೂ ಕೂಡ ಒಂದು ನೀತಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ ಮತ್ತು ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಂದು ನಾವು ಕೂಡ ಹೇಳಿದ್ದೇವೆ ಅದನ್ನು ಸರಕಾರ ಕೂಡ ಒಪ್ಪಿದೆ ಅದನ್ನು ನಾವು ಕೂಡ ಒಪ್ಪಿಕೊಂಡಿದ್ದೇವೆ. ನಾನು ಈಗ ಹೇಳತಕ್ಕಂತಹ ಪ್ರಶ್ನೆ ಇಷ್ಟೇ. ನೀವು ರೋಸ್ಟರ್ ಸಿಸ್ಟಂಗೆ ಒಳಪಟ್ಟು ಅವರನ್ನು ಖಾಯಂ ಮಾಡತಕ್ಕಂತಹ ಒಲವನ್ನು ಆ ಸಾರಿ ತೋರಿಸಿದ್ದರಿಂದ, ಅದಕ್ಕೆ ವಿಭಿನ್ನವಾಗಿರತಕ್ಕಂತಹ ಹೇಳಿಕೆಯನ್ನು ಕೊಡತಕ್ಕಂತಹ ಸಂದರ್ಭ ಈಗಾಗಲೇ ಉದ್ಭವವಾಗಿದೆ ಎಂದು ಅನಿಸುತ್ತದೆ. ನಿನ್ನೆ ಅವರ ಪ್ರತಿನಿಧಿ ನಿವಾಸ್‌ನ್ನು ಕಂಡಿದ್ದರು. ನಾವೂ ಕೂಡ ಅಲ್ಲಿಗೆ ಹೋಗಬೇಕೆಂದಿದ್ದೆವು ನಂತರ ಹೋದಾಗ ಅವರ್ಯಾರೂ ಅಲ್ಲಿ ಇರಲಿಲ್ಲ ಪೋಲೀಸರು ಅವರನ್ನು ಅರೆಸ್ಟ್ ಮಾಡಿ ಪೋಲೀಸ್ ವ್ಯಾನಿನೊಳಗೆ ತುಂಬಿಕೊಂಡು ಹೋಗಿದ್ದಾರೆ, ಅಲ್ಲಿ ಜಾಗ ಖಾಲಿ ಇತ್ತು ನಮ್ಮ ನಾಯಕಿಯವರೂ ಕೂಡ ಹೋಗಿ ಬರಬೇಕೆಂದಿದ್ದರು. ನಾವು ನಾಲ್ಕೈದು ಜನ ಶಾಸಕರು ಒಟ್ಟಿಗೆ ಹೋಗಿ ಬಂದೆವು. ಜೈಲ್ ಭರೋ ಕಾರ್ಯಕ್ರಮ ಮತ್ತೆ ಪ್ರಾರಂಭವಾಯಿತೆಂದು ನನಗೆ ಗೊತ್ತಾಯಿತು.

ಉಚ್ಚಶಿಕ್ಷಣ ಮಂತ್ರಿಗಳಾದ ಶ್ರೀ ಜೀವರಾಜ್ ಆಳ್ವರವರನ್ನು ನಿನ್ನೆ ಮೊನ್ನೆ ಅವರು ಬಂದು ಕಂಡಿದ್ದರು. ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ನಿಮ್ಮ ಸಂಬಳದ ವಿಚಾರ ಏನಿದೆ ಅದನ್ನು ಇನ್ನು ಒಂದು ತಿಂಗಳಲ್ಲಿ ಬಗೆಹರಿಸುತ್ತೇವೆ ಆದರೆ ಖಾಯಂ ಮಾಡತಕ್ಕಂತಹ ವಿಚಾರ ಏನಿದೆ ಇದರ ಬಗ್ಗೆ ತೀರ್ಮಾನ ಮಾಡಲು ಆರು ತಿಂಗಳ ಸಮಯ ಬೇಕಾಗಬಹುದು ಅನ್ನುವ ಮಾತನ್ನು ಕಬ್ಬನ್ ಪಾರ್ಕಿನಲ್ಲಿ ಭಾಷಣ ಮಾಡುವ ಕಾಲದಲ್ಲಿ ಹೇಳಿದರು ಎಂದು ನನಗೆ ಹೇಳಿದರು. ನ್ಯಾಯಾಂಗ ಇಲಾಖೆಯ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಇನ್ನೂ ಕೆಲವು ವಿಚಾರಗಳು ಇದೆ.

ಶ್ರೀ ರಮೇಶ್ ಕುಮಾರ್ —ನಿನ್ನೆ ಅವರ ನಾಯಕರು ಬಂದಿದ್ದರು ಡಾ ಜೀವರಾಜ್ ಆಳ್ವರವರ ಜೊತೆಯಲ್ಲಿ ನಾನೂ ಕೂಡ ಇದ್ದೆ ಮತ್ತು ಅವರ ಪರವಾಗಿ ಉನ್ನತ ಶಿಕ್ಷಣ ಸಚಿವರ ಹತ್ತಿರ ಮಾತನಾಡಿದೆ ಇದಕ್ಕೆ ಒಂದು ಟೈಮ್ ಲಿಮಿಟ್ ಇಟ್ಟುಕೊಳ್ಳಿ ಎಂದು ಹೇಳಿದೆ. ನಿಮ್ಮ ಪರವಾಗಿ ವಾದ ಮಾಡತಕ್ಕಂತಹ ಸರ್ವಿಸ್ ಮ್ಯಾಟರ್ ಅನ್ನು ಜೆನ್ಯಾಗಿ ಗೊತ್ತಿರತಕ್ಕಂತಹವರು ಯಾರಿದ್ದಾರೆ ಅವರನ್ನು ವಕೀಲಿಕೆ ಮಾಡಲು ಬಿಡಿ ನಿಮ್ಮ ಪ್ರಾಬ್ಲಮ್ಸ್ ಏನಿದೆ ಅದನ್ನು ವಿಚಾರ ಮಾಡಿ ಕಾನೂನು ಇಲಾಖೆಯವರ ಹತ್ತಿರ ವಿಚಾರ ಮಾಡಿ ಮಾಡಬೇಕಾಗುತ್ತದೆ. ಒಂದೇ ಸಲ ಇವತ್ತೇ ಮಾಡಬೇಕು ಎಂದು ಹೇಳಿದರೆ ಮಾಡುವುದಕ್ಕಾಗುವುದಿಲ್ಲ ಕಷ್ಟವಾಗುತ್ತದೆ ಎಂದು ಹೇಳಿದೆ. ಆಗ ಅವರು ಹೇಳಿದರು ನಮ್ಮ ಸ್ನೇಹಿತರು ಹಠ ಹಿಡಿದಿದ್ದಾರೆ. ನೀವೇ ಬಂದು ಅವರಿಗೆ ಕನ್ವಿನ್ಸ್ ಮಾಡಿ ಎಂದು ಹೇಳಿದರು ನಾನು ಹೋಗತಕ್ಕಂತಹ ಸಂದರ್ಭದಲ್ಲಿ ಮಾನ್ಯ ಸಚಿವರನ್ನೂ ಕರೆದುಕೊಂಡು ಅಲ್ಲಿಗೆ ಹೋದೆ ಅವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು ನಮಗೆ ಮಾತನಾಡುವುದಕ್ಕೆ ಬಿಡಲಿಲ್ಲ. I dont want to find fallt with them. They are in agitating mood. ಇವರು ಹೇಳಿದ್ದನ್ನು ಕೇಳತಕ್ಕಂತಹ ಸ್ಥಿತಿಯಲ್ಲಿ ಅವರು ಇರಲಿಲ್ಲ. ಇವರು ಆರು ತಿಂಗಳು ಎಂದು ಹೇಳುವುದಕ್ಕೆ ಅವಕಾಶ ಕೊಡಲಿಲ್ಲ ಮತ್ತು ಅವರು ತಮ್ಮ ಮಾತನ್ನು ಮುಂದುವರಿಸುವುದಕ್ಕೆ ಆಗಲಿಲ್ಲ ಅರ್ಧಂಬರ್ಧಕ್ಕೆ ಮುಗಿಯಿತು ಅಲ್ಲಿ ಈ ಪ್ರಸ್ತಾಪ ಬರಲಿಲ್ಲ. That was discussed here when they had come in delegationi.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂಜುನಾಥ್‌ರವರು ಇದಕ್ಕಿಂತ ಮೊದಲು ಶಿಕ್ಷಣ ಸಚಿವರಾಗಿದ್ದಾಗ ಮಂತ್ರಿಮಂಡಲದ ಸಭೆಯಲ್ಲಿಟ್ಟು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆಯನ್ನು ಕೊಟ್ಟು ಸಮಯವನ್ನು ನಿಗದಿ ಮಾಡಿ ಮತ್ತೆ ಮಾಡದೇ ಇರತಕ್ಕಂತಾದ ನನ್ನ ಅವರುಗಳಿಂದ ಪ್ರಿಂಟ್ ಮಾಡಿಸಿ ಹಂಚಿದ್ದಾರೆ. ಸಂಬಂಧಪಟ್ಟ ಸಚಿವರು ಕಾಲವನ್ನು ನಿಗದಿ ಮಾಡಿ ಅದಕ್ಕೆ ತಕ್ಕಹಾಗೆ ನಡೆದುಕೊಳ್ಳಬೇಕಾಗಿತ್ತು. They are totally agitated over the matter. ನನಗೆ ಗೊತ್ತಿಲ್ಲ ಅವರಿಗೆ ಮಾತನಾಡುವುದಕ್ಕೆ ಬಿಡದೆ ಇರುವಂತಹ ಸಂದರ್ಭ ಆಗಿರಬಹುದು ಎಂದು ನನಗನ್ನಿಸುತ್ತದೆ. ಇನ್ನು ಒಂದು ವಾರದಲ್ಲಿ ತೀರ್ಮಾನ ಮಾಡುತ್ತೇವೆಂಬ ಆಶ್ವಾಸನೆಯನ್ನು ಸದನಕ್ಕೆ ಕೊಟ್ಟರೆ ಒಳ್ಳೆಯದು. ಧರಣಿಸೆಗಳ ಸಮಿತಿಗೆ ಕಳಿಸುತ್ತೇವೆಂದು ಹೇಳಬಹುದು ಅಲ್ಲಿಗೆ ಕಳಿಸುತ್ತಾ ಕೂತರೆ ಇಲ್ಲಿ ಸತ್ಯಾಗ್ರಹ ಮಾಡುವವರನ್ನು ಕೂರಿಸಿಕೊಂಡು ಅಪ್ಪೋರೆನ್ಸ್ ಕಮಿಟಿಯಲ್ಲಿ ನಾವು ಇದನ್ನು ನಡೆಸುವುದಕ್ಕಾಗುವುದಿಲ್ಲ. ಜವಾಬ್ದಾರಿಯುತವಾದ ಸ್ಥಾನದಲ್ಲಿರುವ ಸಚಿವರು ಇದರ ಬಗ್ಗೆ ಹೇಳಿಕೆ ಕೊಡಬೇಕು.

ಮಾಡತಕ್ಕಂಥ ಕೆಲಸವನ್ನು ಹಠಹಿಡಿದು ಮಾಡಬೇಕು. ಇಷ್ಟು ಮಾಡಿದ್ದೇವೆ ಆಮೇಲೆ ಮಾಡುವುದಕ್ಕೆ ತೊಂದರೆ ಇದೆ. ನಮಗೆ ಇನ್ನೂ ಸ್ವಲ್ಪ ಕಾಲಾವಕಾಶ ಬೇಕು. ಅಥವಾ ಆಗುವುದಿಲ್ಲವೆಂದು ಹೇಳಲಿ. ಇಲ್ಲ ಆಗುತ್ತದೆ ಎಂದು ಹೇಳಲಿ, ಅವರಿಗೂ ಕೂಡ ಸಮಾಧಾನ ಆಗುತ್ತದೆ. ಸರ್ಕಾರ ಮಾತು ಕೊಡುತ್ತಲೇ ಹೋಯಿತು. ಕಾಲ ಕಳೆಯುತ್ತಾ ಹೋಯಿತು. ಇವರು ಸಮಯ ನಿಗದಿ ಮಾಡುತ್ತಲೇ ಹೋದರು. ಹೀಗಾದರೆ ಜನರಿಗೆ ನಂಬಿಕೆ ಉಳಿಯುತ್ತದೆಯೇ ? ಸರ್ಕಾರದ ಬಗ್ಗೆ ಒಮ್ಮೆ ಅಪನಂಬಿಕೆ ಬಂದುಬಿಟ್ಟರೆ ಏನಾಗುತ್ತದೆ ? ಇವತ್ತು ಈ ಇಲಾಖೆ ಇರಬಹುದು. ನಾಳೆ ಎಲ್ಲಾ ಇಲಾಖೆಗಳಲ್ಲೂ ಇಂತಹ ಪರಿಸ್ಥಿತಿ ಉದ್ಭವವಾಗುತ್ತದೆ. ಸಚಿವರು ಯಾರೇ ಇರಬಹುದು. ಮಾತು ಕೊಡಬೇಕಾದರೆ ಜವಾಬ್ದಾರಿಯಿಂದ ಕೊಟ್ಟು ಆದಕ್ಕೆ ತಕ್ಕಹಾಗೆ ನಡವಳಿಕೆಯನ್ನು ಇಟ್ಟುಕೊಳ್ಳದೇ ಹೋದರೆ ಅದರ ಪರಿಣಾಮ ಏನಾಗುತ್ತದೆ ? ಇದಕ್ಕೆ ಇದೊಂದು ದೊಡ್ಡ ನಿದರ್ಶನವಾಗಿ ಉಳಿಯುತ್ತದೆ. ಇದನ್ನು ಒಂದು ಉದಾಹರಣೆಯಾಗಿ ಉಲ್ಲೇಖ ಮಾಡುವುದಕ್ಕೆ ಉಳಿಯುತ್ತದೆಯೇ ಹೊರತು ಸಮಸ್ಯೆಗೆ ಪರಿಹಾರ ಸಿಕ್ಕಂತಾಗಲಿಲ್ಲ. ಕಾನೂನು ಇಲಾಖೆಯ ವಿಚಾರದಲ್ಲಿ ಇಷ್ಟು ದಿವಸ

ಬೇಕಾಗಿತ್ತಾ? ಸದನ ಸೇರಿ ಎಷ್ಟು ದಿವಸವಾಗಿದೆ ? ಪದೇ ಪದೇ ಅವರು ಸರ್ಕಾರವನ್ನು ಕಾಂಟ್ರಾಕ್ಟ್ ಮಾಡುತ್ತಿದ್ದಾರೆ. ಮಂತ್ರಿಮಂಡಲಗಳನ್ನು ಹಿಂದೆ ಹೋಗಿ ನೋಡಿದ್ದಾರೆ. ಈಗ ಏನಾಗಿದೆ ಎಂದರೆ ಮಾನ್ಯ ಅಧ್ಯಕ್ಷರೇ, ನಾವೇ ಇಲ್ಲಿ ಇವರ ಬಗ್ಗೆ ಅನುಮಾನ ಪಡತಕ್ಕಂಥ ಸಂದರ್ಭ ಅನಿವಾರ್ಯವಾಗಿದೆ. ಒಂದು ವಾರ ಅಂತ ಇಲ್ಲಿ ಹೇಳಿದರು. ನಾನು ಹೆಚ್ಚಿಗೆ ಹೇಳುವುದಿಲ್ಲ. ಹಿಂದೆ ಅವರ ಮಂತ್ರಿಮಂಡಲ ಇಷ್ಟೇ ಇತ್ತು. ಸೇರುವುದಕ್ಕೆ ಆಗಲಿಲ್ಲ ಎಂದೆ ಹಿಂದೆ ಜನರ ಮಂತ್ರಿಮಂಡಲ ಸಭೆ ಇಟ್ಟುಕೊಂಡು ಆಗಲಿಲ್ಲವೆಂದರೆ ಇದರ ಬಗ್ಗೆ ಏನು ತಿಳಿದುಕೊಳ್ಳೋಣ ? ಇಲ್ಲಿ ಏನು ಆಗುತ್ತಿದೆ ಎಂದರೆ ಮಂತ್ರಿಮಂಡಲ ಸಭೆ ಅವಿಧಿವತ್ತಾಗಿ, ಜಮ್ಮಾಹತವಾಗಿ ನಡೆಯುತ್ತಿದ್ದರೂ ಕೂಡ ನಮಗೆ ಈ ಸದನಕ್ಕೆ ಕೊಟ್ಟಂಥ ಮಾತಿನ ಗತಿ ಏನಾಗುತ್ತದೆ ? ನಾವು ಯಾಕೆ ಇಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಬೇಕು ? ಏನೋ ಒಬ್ಬರು ಪ್ರಸ್ತಾಪ ಮಾಡುತ್ತಾರೆ ಮಾತನಾಡುತ್ತಾರೆ ಎನ್ನುವುದಾದರೆ ಈ ಮಾತಿಗೆ, ಚರ್ಚೆಗೆ ಅರ್ಥ ಇಲ್ಲವೇ ಬೆಲೆ ಇಲ್ಲವೇ ? ಹಾಗಾದರೆ ಇಲ್ಲಿ ಚರ್ಚೆ ಏಕೆ ಮಾಡಬೇಕು ? ಅಧ್ಯಕ್ಷರು ಸುಮ್ಮನೆ ಗಂಟೆ ಹೊಡೆಯುತ್ತಿರುತ್ತಾರೆ, ಮಾತನಾಡುವವರು ಭಾಷಣ ಮಾಡುತ್ತಿರುತ್ತಾರೆ. ಒಂದು ವಾರ ಹೇಗೋ ಚಿಟಿಕೆ ಹೊಡೆದ ಹಾಗೆ ಹೋಗುತ್ತದೆ ಎಂದು ಚಿಟಿಕೆ ಹೊಡೆದುಕೊಂಡು ಹೋಗುವುದಕ್ಕೆ ಅವಕಾಶ ಕೊಡುವುದಕ್ಕೆ ಆಗುತ್ತದೆಯೆ ? ಇದು ಈ ಸದನದ ಹಕ್ಕು. ಇಲ್ಲಿ ಯಾರು ಯಾವ ಭರವಸೆಗಳನ್ನು ಕೊಡುತ್ತಾರೆ, ಅದನ್ನು ನಡೆಸಬೇಕು. ಇಲ್ಲಿ ಸಂಖ್ಯೆ ಪ್ರಶ್ನೆ ಬೇರೆ ಕುದುರೆ ಎಷ್ಟೇ ವೇಗವಾಗಿ ಓಡಿದರೂ ಕೂಡ ಈ ಸಂಖ್ಯೆಯನ್ನು ಕೂಡ ಸಂಪೂರ್ಣವಾಗಿ ಸರಿಸಿ ನಾವು ಓಡತಕ್ಕ ಕುದುರೆಗೆ ಲಂಗು ಲಗಾಮ್ ಹಾಕುವುದಕ್ಕೆ ಕೆಲವೊಮ್ಮೆ ಸಾಧ್ಯವಾಗಬಹುದು. ಸದಸ್ಯರಿಗೆ ಅವರು ಯಾವುದೇ ಪಕ್ಷದವರಾಗಲಿ, ಅವರಿಗೆ ಈ ಹಕ್ಕು ಇದೆ. ಈ ಹಕ್ಕನ್ನು ಚಲಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಇದ್ದೇವೆ. ಇವತ್ತು ನಮಗೆ ಕೊಟ್ಟ ಮಾತನ್ನು ಮರೆತು, ತಮಗೆ ಕೊಟ್ಟ ಮಾತನ್ನು ಮರೆತು ಬರೇ ಕೊಟ್ಟ ಮಾತನ್ನು ಮರೆಯತಕ್ಕಂಥ ಕಾರ್ಯಕರ್ತೆವೇ ನಿಮ್ಮದು ಆಗಿಬಿಟ್ಟರೆ ಸರ್ಕಾರ ಏಕೆ ಇರಬೇಕು ಎಂಬ ಪ್ರಶ್ನೆಯನ್ನು ಅನಿವಾರ್ಯವಾಗಿ ಇಲ್ಲಿ ಎತ್ತಬೇಕಾಗುತ್ತದೆ.

ಈಗ ಕೊನೆಯದಾಗಿ, ಒಂದೇ ಒಂದು ಮಾತನ್ನು ಹೇಳುತ್ತೇನೆ. ಎಷ್ಟು ಮಾತನಾಡಿದರೂ ವಿಚಾರ ಇಷ್ಟೇನೆ. ಈಗೇನು ಆರು-ಎಂಟು ಸಾವಿರ ಜೆಲ್ಲರೆ ಶಿಕ್ಷಕರು ಬಂದಿದ್ದಾರೆ ಎಂದು ಹೇಳಿದ್ದಾರೆ. ಇಲ್ಲಿ ಏನಾಗಿದೆ ಎಂದರೆ ಒಂದು ಪತ್ರಿಕೆಯಲ್ಲಿ ಹೇಳಿಕೆ ಕೂಡ ಬಂದಂಬಿಟ್ಟಿದೆ. ಈ ಒಂದು ವಿಚಾರ ಸಂಪೂರ್ಣವಾಗಿ ಇತ್ಯರ್ಥವಾಗಿದೆ. ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡ ಶಿಕ್ಷಕರನ್ನು ಖಾಯಂ ಮಾಡಲಾಗಿದೆ ಎಂದು ಯಾವುದೋ ಒಂದು ಹೇಳಿಕೆ ಪತ್ರಿಕೆಯಲ್ಲಿ ಬಂದಂಬಿಟ್ಟಿದೆ. ಈ ಪ್ರೆಸ್ ಕಟಿಂಗ್ ಅನ್ನು ಅವರು ಇಟ್ಟುಕೊಂಡಿದ್ದಾರೆ. ಇಂಥಾದ್ದನ್ನು ಕೆಲವು ವೀಕ್ಲಿಯವರು ಪ್ರಿಂಟ್ ಮಾಡುತ್ತಾರೆ. ಅದು ಏನೋ ನನಗೆ ಗೊತ್ತಿಲ್ಲ. ಇದನ್ನು ನೋಡಿ ಕೆಲವರು ಎಲ್ಲಾ ಖಾಯಂ ಮಾಡಿಬಿಟ್ಟಿದ್ದಾರೆ, ಮತ್ತೆ ಯಾಕೆ ಹೋಗಬೇಕೆಂದು ಅವರವರ ಹೈಸ್ಕೂಲು, ಕಾಲೇಜುಗಳಲ್ಲಿ ಪಾಠಪ್ರವಚನ ಮಾಡಿಕೊಂಡಿದ್ದಾರೆ. ಆರು ಸಾವಿರ, ಎಂಟು ಸಾವಿರ ಜನ ಇಲ್ಲಿ ಬಂದು ಕುಳಿತುಕೊಂಡಾಗ ಅವರನ್ನು ತೆಗೆದುಕೊಂಡು ಹೋಗಿ ಅರೆಸ್ಟ್ ಮಾಡಿ ಪೋಲೀಸ್ ಸ್ಟೇಷನ್‌ಗೋ, ಜೈಲಿಗೋ ಕರೆದುಕೊಂಡು ಹೋಗಿದ್ದಾರೆ. ಪೋಲೀಸ್ ವ್ಯಾನ್‌ಗಳು ಸಿಕ್ಕಾಪಟ್ಟೆ ಬಂದು ನಿಂತುಕೊಂಡಿದೆಯಂತೆ. ಸುಮಾರಾಗಿ ಲಾಠಿ ಚಾರ್ಜ್ ಆಯಿತೋ ಇಲ್ಲವೋ ಎಂದು ಇವರ ಬಗ್ಗೆ ವಿವರ ತೆಗೆದುಕೊಳ್ಳುವುದಕ್ಕೆ ನನ್ನಿಂದ ಆಗಲಿಲ್ಲ.

ರೋಸ್ಟರ್ ಸಿಸ್ಟಂಗೆ ಒಳಪಡಿಸಿ, ಖಾಯಂ ಮಾಡತಕ್ಕಂಥ ತೀರ್ಮಾನವನ್ನು ಹೇಳಬೇಕು. ನಿಮ್ಮ ಮುಂದಿನ ಮಂತ್ರಿಮಂಡಲದ ಸಭೆ ಬಗ್ಗೆ ನಮಗೆ ನಂಬಿಕೆ ಹೊರಟುಹೋಗಿದೆ. ಈಗಲೇ ತಾವು ಉತ್ತರ ಕೊಡಬೇಕು. ಮಾನ್ಯ ಸೂಪರಿಂಟೆಂಡೆಂಟ್ ಅವರು ಇದ್ದಾರೆ. ಸರ್ಕಾರದ ಪರವಾಗಿ ಅವರು ಹೇಳಿಕೆ ಕೊಡಬೇಕು. ತಕ್ಷಣ ರೋಸ್ಟರ್ ಸಿಸ್ಟಂಗೆ ಒಳಪಡಿಸಿ ಅವರನ್ನು ಖಾಯಂ ಮಾಡತಕ್ಕಂಥ ಕೆಲಸ ಮಾಡಬೇಕು ಕಾಲ ತೆಗೆದುಕೊಂಡು ಮತ್ತೆ ಮಾಡುತ್ತೇವೆಂದು ಹೇಳಿದರೆ ಆಗುವುದಿಲ್ಲ. ಈ ಸದನಕ್ಕೆ ಕೊಟ್ಟಿರತಕ್ಕಂಥ ಮಾತಿಗೆ ನೀವು ಬದ್ಧರಾಗಬೇಕೆಂದು ಹೇಳಿ ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಂಗಿಸುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಸಭಾಧ್ಯಕ್ಷರೇ, ಗುತ್ತಿಗೆ ಶಿಕ್ಷಕರ ಮತ್ತು ಉಪನ್ಯಾಸಕರ ಭಾವನೆಗಳನ್ನು ಮತ್ತು ಅವರು ಇಪತ್ತು ಅನುಭವಿಸತಕ್ಕಂಥ ಹಲವಾರು ವಿಚಾರಗಳನ್ನು, ಮಾನ್ಯ ಬಂಗಾರಪ್ಪನವರು ಸಮೃದ್ಧವಾಗಿ, ಸರ್ಕಾರದ ಮುಂದೆ ಈ ಸಭೆಯ ಮುಂದೆ ವಿಷಾದವಾಗಿ ವ್ಯಕ್ತ ಪಡಿಸಿದ್ದಾರೆ. ಮುಕ್ಕಳ ಭವಿಷ್ಯವನ್ನು ರೂಪಿಸತಕ್ಕಂಥ ಜವಾಬ್ದಾರಿ ಹೊತ್ತಿರತಕ್ಕ ಶಿಕ್ಷಕರ ಭವಿಷ್ಯ

ಇವತ್ತು ಅಭದ್ರವಾಗಿದೆ. ಗುತ್ತಿಗೆ ಶಿಕ್ಷಕರ ಮತ್ತು ಉಪನ್ಯಾಸಕರನ್ನು ಖಾಯಂ ಮಾಡುವುದರಲ್ಲಿ ಸರ್ಕಾರಕ್ಕೆ ಇರತಕ್ಕಂಥ, ಸ್ಪಷ್ಟವಾದ ತೊಂದರೆಯನ್ನು ಮಾನ್ಯ ಇಬ್ಬರು ಮಂತ್ರಿಗಳು ಎಲ್ಲೂ ಕೂಡ ಸ್ಪಷ್ಟಪಡಿಸಿಲ್ಲ ಪ್ರಾಯಶಃ ಇಲ್ಲಿ ಮಾತನಾಡಿರತಕ್ಕ ಸದಸ್ಯರುಗಳಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಶಿಕ್ಷಕರನ್ನು ರೋಸ್ಟರ್ ಪದ್ಧತಿಗೆ ಒಳಪಡಿಸಿ ನೇಮಕ ಮಾಡಲಾಗಿದೆ ಈ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವಾಗ ಸಂದರ್ಶನ ಕೂಡ ನಡೆಸಲಾಗಿದೆ ಖಾಲಿ ಇರತಕ್ಕ ಹುದ್ದೆಗಳಿಗೆ ಮಾತ್ರ ಈ ಶಿಕ್ಷಕರನ್ನು ನೇಮಕಮಾಡಿದ್ದಾರೆ. ಎಂಬ ವಿಚಾರವನ್ನು ಹೇಳಿದಾರೆ ಇಷ್ಟೆಲ್ಲಾ ಇರತಕ್ಕ ಸಮಯದಲ್ಲಿ ಇವರನು ಖಾಯಂಗೊಳಿಸವಲ್ಲಿ ಸರ್ಕಾರ ತೋರಿಸತಕ್ಕಂಥ ನಿಧಾನದ ಹಿಂದೆ ಯಾವ ಭಾವನೆ ಅಡಗಿದೆ ಎಂಬ ಸಂಶಯವಾವಗುತ್ತಿದೆ ಜೊತೆಗೆ ಈ ಗುತಿಗೆ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಸರ್ಕಾರ ಯಾವುದೇರೀತಿಯ ಒಂದು ಭದ್ರತೆಯ ಆಶ್ವಾಸನೆಯನ್ನು ಕೊಡುವುದರಲ್ಲಿ ಏತಕ್ಕೋ ಹಿಂದೇಟು ಹಾಕುತ್ತಿದ್ದಾರೆ. ಈ ವಿಚಾರ ನಮಗೆ ಅರ್ಥವಾಗುತ್ತಿಲ್ಲ. ಈ ಶಿಕ್ಷಕರು ಕೇಳುತ್ತಿದ್ದಾರೆ ನಾವು ಸರ್ಕಾರದ ಆದೇಶದ ಪ್ರಕಾರ ಹೇಳಿಗತಕ್ಕಂತ ಕನ್‌ಸಾಲಿಡೇಟೆಡ್ ಪೇ ಕೊಡಿ ಎಂದು ಕೇಳುತ್ತಿದ್ದಾರೆ. ಈ ಗುತ್ತಿಗೆ ಶಿಕ್ಷಕರಲ್ಲಿ ಪ್ರಾಥಮಿಕ ಶಾಲೆಯವರಿಗೆ ೫೪೦ ರೂಪಾಯಿಗಳನ್ನು ಹೈಸ್ಕೂಲಿಂಗಳಲ್ಲಿ ಕೆಲಸ ಮಾಡುತ್ತಿರವವರಿಗೆ ೭೪೦ ರೂಪಾಯಿಗಳು ಹಾಗೂ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ೧೦೪೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈಗ ಹಾಲಿ ಖಾಯಂ ಶಿಕ್ಷಕರಾಗಿ ಕೆಲಸ ಮಾಡತಕ್ಕಂಥವರಿಗೆ ಎಷ್ಟು ಸಂಬಳ ಎಂದರೆ ಪ್ರೈಮರಿ ಶಿಕ್ಷಕರಿಗೆ ೧೦೪೦ ರೂಪಾಯಿ ಹೈಸ್ಕೂಲು ಶಿಕ್ಷಕರಿಗೆ ೧೪೦೦ ರೂಪಾಯಿ ಕಾಲೇಜು ಶಿಕ್ಷಕರಿಗೆ ೧೯೦೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಎಂದರೆ ಈ ರೀತಿ ಖಾಯಂ ಶಿಕ್ಷಕರಿಗೆ ಕೊಡತಕ್ಕ ಸಂಬಳದಲ್ಲಿ ಕೇವಲ ೧೦ ರೂಪಾಯಿ ಕಡಿಮೆಗೊಳಿಸಿ ಈ ಗುತ್ತಿಗೆ ಶಿಕ್ಷಕರಿಗೆ ಸಂಬಳ ಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ ಆದರೆ ಈ ಮಾತಿನಂತೆ ಸರ್ಕರ ಇವತ್ತು ನಡೆದುಕೊಂಡಿಲ್ಲ ೧೦೪೦ ರೂಪಾಯಿ ಕೊಡುವವರಿಗೆ ೫೪೦ ರೂ. ಕೊಡತ್ತಿದ್ದಾರೆ ೧೪೦೦ ಕೊಡವವರಿಗೆ ೭೪೦ ಕೊಡುತ್ತಿದ್ದಾರೆ ೧೯೦೦ ರೂ. ಕೊಡುವವರಿಗೆ ೧೦೪೦ ರೂ. ಕೊಡುತ್ತಿದ್ದಾರೆ. ಅಧ್ಯಕ್ಷರೇ ಈ ನೂ ಪೇ ಸ್ಕೇಲ್ಸ್ ಏನಿದೆ ಅದನ್ನು ನಮಗೆ ಕೊಡುತ್ತಿಲ್ಲ ಎಂದು ಗುತಿಗೆ ಶಿಕ್ಷಕರು ಮತ್ತು ಉಪನ್ಯಾಸಕರು ಹೇಳುತ್ತಿದ್ದಾರೆ. ಇವನ್ನು ನೇಮಕ ಮಾಡಿಕೊಳ್ಳಲಿಕ್ಕೆ ಡಿ.ಎಲ್.ಆರ್.ಸಿ. ಆಗಿದೆ ಎಸ್.ಎಲ್.ಆರ್.ಸಿ. ಆಗಿದೆ ಪ್ರೌಢಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಿಕ್ಕೂ ಕಮಿಟಿಗಳು ಆಗಿವೆ. ಆದರೆ ಇವರು ಏನು ಹೇಳುತ್ತಿದ್ದಾರೆ ಎಂದರೆ ನಮ್ಮನ್ನು ಹಾಗೆ ಖಾಯಂ ಮಾಡಿದ ನಂತರ ಕಮಿಟಿಗಳ ಮುಖಾಂತರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಇದಕ್ಕೆ ಇರತಕ್ಕಂತ ತೊಂದರೆ ಏನು ? ಇವರುಗಳಿಗೆ ನಾಲ್ಕು ವರ್ಷಗಳ ಸೇವಾ ಹಿರಿತನ ಇದೆ ನಮ್ಮನ್ನು ಹೊಸದಾಗಿ ಬರತಕ್ಕಂಥ ಶಿಕ್ಷಕರ ಜೊತೆಗೆ ಸೇರಿಸಿದರೆ ನಾವು ಪಾಠ ಮಾಡಿರತಕ್ಕಂಥ ವಿದ್ಯಾರ್ಥಿಗಳು ನಮ್ಮತಂಹ ಸಿನೀಯರ್ ಆಗುತ್ತಾರೆ ಆದುದರಿಂದ ಸೇವಾ ಹಿರಿತನವನ್ನು ಗಮನಿಸಿ ನಮ್ಮನ್ನು ಖಾಯಂಮಾಡಿ ಎಂದು ಹೇಳುತ್ತಿದ್ದಾರೆ ಇವರಿಗೆ ಕನ್‌ಸಾಲಿಡೇಟ್ ಪೇ ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ. ಬೇಸಿಕ್‌ನಲ್ಲಿ ಹತ್ತುರೂಪಾಯಿ ಕಡಿಮೆ ಕೊಡಿ ಎಂದು ಹೇಳಿದ್ದೀರಿ. ಆದನ್ನು ಈಗ ಮಾಡಿ ಹಾಗೂ ಜೊತೆಗೆ ಇವರಿಗೆ ಸೇವಾ ಭದ್ರತೆಯನ್ನು ಒದಗಿಸಿಕೊಡಿ. ಇವರ ಬದಕಿನಲ್ಲಿ ಏನಾಗಿದೆ ಎಂದರೆ ಒಂದು ರೀತಿಯಾದ ಡೋಲಾಯಮಾನತೆ ಹಾಗೂ ದ್ವಂದ್ವತೆ ಇದೆ. ಒಂದು ಕಡೆ ಇವರು ಪಾಠ ಮಾಡಬೇಕು. ಇನ್ನೊಂದು ಕಡೆ ಸೇವಾ ಭದ್ರತೆ ಇಲ್ಲ ಎಂದು ಯೋಚನೆ ಮಾಡಬೇಕು. ಇದರ ಬಗ್ಗೆ ಸರಕಾರ ಯಾವುದೇ ಸ್ಪಷ್ಟವಾದ ಮಾತನ್ನೂ ಹೇಳುತ್ತಿಲ್ಲ. ಖಾಯಂ ಮಾಡುತ್ತೇವೆ ಎಂಬ ಮಾತನ್ನು ಹೇಳತಾರೆಯೇ ಹೊರತು, ಖಂಡಿತವಾಗಿ ಮಾಡುತ್ತೇವೆ, ಇದರ ಬಗ್ಗೆ ನೀವು ಯೋಚತೆ ಮಾಡತಕ್ಕ ಅಗತ್ಯ ಇಲ್ಲ, ನಿಮ್ಮನ್ನು ಕೈ ಬಿಡುವುದಿಲ್ಲ ಎನ್ನತಕ್ಕಂಥ ಸ್ಪಷ್ಟವಾದ ಭರವಸೆಯನ್ನು ಸರಕಾರ ಕೊಟ್ಟರೆ ಅವರು ಈ ಮಟ್ಟಿಕ್ಕೆ ಹೋಗುವುದಿಲ್ಲ. ಯಾವ ಶಿಕ್ಷಕರನ್ನು ಸರಕಾರ ಗೌರವಯುತವಾಗಿ ನಡೆಸಿಕೊಳ್ಳಬೇಕಾಗಿತ್ತೋ ಆ ಮಟ್ಟದಲ್ಲಿ ನಡೆಸಿಕೊಂಡಿಲ್ಲ, ಅವರು ಇವತ್ತು ಜೈಲ್‌ಭರೋ ಕಾರ್ಯಕ್ರಮ ಹಾಕಬೇಕಾದ ಪರಿಸ್ಥಿತಿ ಬಂದಿದೆ. ಹೆಣ್ಣುಮಕ್ಕಳೂ ಸಹ ಜೈಲಿಗೆ ಹೋಗತಕ್ಕಂಥ ನಿರ್ಧಾರ ಮಾಡಿದ್ದಾರೆ ಎಂದರೆ, ಈ ಸರಕಾರದವರು ಏತಕ್ಕೆ ಈ ರೀತಿ ಇನ್ನೂ ನಿರ್ಧಾರ ಕೈಗೊಳ್ಳದೆ ಇದ್ದಾರೆ ಎಂಬುದು ಅರ್ಥವಾಗಿಲ್ಲ. ಇಷ್ಟು ಮಾತ್ರ ನಿಖರವಾಗಿ ಹೇಳುತ್ತೇನೆ. ಈ ಗುತ್ತಿಗೆ ಶಿಕ್ಷಕರಿಗೆ, ಉಪನ್ಯಾಸಕರಿಗೆ ಅನ್ಯಾಯವಾಗಿದೆ ಎಂಬುದು ಈ ಸರಕಾರಕ್ಕೆ ಹಾಗೂ ಈ ಸದನದ ಎಲ್ಲಾ ಸದಸ್ಯರಿಗೆ ಸ್ಪಷ್ಟವಾಗಿದೆ. ನಿಯಮಗಳಿಗೆ ಒಳಪಟ್ಟು, ರೋಸ್ಟರ್ ಸಿಸ್ಟಮ್‌ಗೆ ಒಳಪಟ್ಟು ಇವರನ್ನು ಖಾಯಂ ಮಾಡತಕ್ಕಂಥ ಸ್ಪಷ್ಟವಾದ ಭರವಸೆಯನ್ನು ಸರಕಾರ ಕೊಡಬೇಕೆಂದು ಹೇಳುತ್ತಾ ತಮಗೆ ಪಂದಿಸಿ ನನ್ನ ಮಾತನ್ನು ಮುಂಗಿಸುತ್ತೇವೆ.

ಶ್ರೀ ಬಿ. ಎ. ಉಮರಬ್ಬ — ಸನ್ಮಾನ್ಯ ಅಧ್ಯಕ್ಷರೇ, ೧೦.೪೦ ಶಿಕ್ಷಕರ ಇವತ್ತಿನ ಒಂದು ಅಸ್ಥಿರ ಪರಿಸ್ಥಿತಿ ಏನಿದೆ ಅದು ೧೦.೪೦ ಕಟುಂಬದಲ್ಲಿನ ಒಂದು ರೀತಿಯ ತೀವ್ರ ಆಸಮಾಧಾನ ಎಂದು ಹೇಳುವುದಕ್ಕಿಂತ ಮಾನಸಿಕ ತೊಳಲಾಟಕ್ಕೆ ಅದು ಒಳಪಡಿಸಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಬಹಳಷ್ಟು ಸಮಯದಿಂದ. ಬಹಳಷ್ಟು ತಿಂಗಳಿಂದ ಈ ಕೋರಿಕೆ ಸರಕಾರದ ಮುಂದಿದ್ದಾಗ ಸರಕಾರ ಒಂದು ನಿರ್ದಿಷ್ಟ ನಿಲುವನ್ನು ಕೈಗೊಳ್ಳಲಿಲ್ಲ. ಈ ಸರಕಾರದ ಧೋರಣೆ ಒಂದು ರೀತಿಯ '' ಪಾರ್ಕಿನ್‌ಸನ್ಸ್ ಧೋರಣೆ '' ಎಂದು ಹೇಳಬೇಕಾಗಿದೆ. ಈ ರೀತಿ ವಿಳಂಬವಾಗುವುದನ್ನು ಕಂಡಾಗ ನನಗನ್ನಿಸುತ್ತಾದೆ. ಗುತ್ತಿಗೆ ಎಂಬ ಪದಕ್ಕೂ, ವಿಳಂಬ ಎಂಬ ಪದಕ್ಕೂ ಸರಕಾರ ಎಲ್ಲೋ ಒಂದು ತಾಳೆ ಹಾಕಂತ್ತಿದೆ ಎಂದು. ಒಂದುಕಡೆ ಗುತ್ತಿಗೆದಾರರಿಂದ ಬರಬೇಕಾದ ಗುತ್ತಿಗೆಯನ್ನು ಅಂದರೆ ಬಾಕಿಯನ್ನು ವಸೂಲು ಮಾಡುವುದಕ್ಕೆ ಸರಕಾರದ ವಿಳಂಬ ಮಾಡುತ್ತಿದೆ, ಇನ್ನೊಂದು ಕಡೆ ಗುತ್ತಿಗೆ ಶಿಕ್ಷಕರನ್ನು ಖಾಯಂ ಮಾಡುವುದಕ್ಕೆ ವಿಳಂಬ ಮಾಡುತ್ತಿದೆ. ಈ ರೀತಿ ವಿಳಂಬ ಧೋರಣೆಯನ್ನು ಸರಕಾರ ತಳೆಯುವುದಾದರೆ ಇದು ಬರುತ್ತಾ ಬರುತ್ತಾ, ಬಹಳಷ್ಟು ಮಂದಿ ಶಿಕ್ಷಕರು ನಿವೃತ್ತಿ ಆದನಂತರ ಸರಕಾರ ಇವರನ್ನು ಖಾಯಂ ಮಾಡುತ್ತದೆಂದು ನನಗನ್ನಿಸುತ್ತದೆ. ಇದರ ಮಧ್ಯೆ ಡಿ. ಎಲ್. ಆರ್. ಸಿ. ಇತ್ಯಾದಿ ಸಮಿತಿಗಳನ್ನು ಮಾಡಿ ಹೊಸ ಶಿಕ್ಷಕರನ್ನು ನೇಮಕ ಮಾಡುವ ಪೆಡ್ಡಿಯನ್ನು ಸರಕಾರ ಇಟ್ಟಾಗ ಗುತ್ತಿಗೆ ಶಿಕ್ಷಕರ ಆತಂಕ ಇನ್ನೂ ತೀವ್ರವಾಗಿದೆ. ಇವರು ಮುಷ್ಕರ ಇವತ್ತೇ ಮಾಡಿದಂಥಾದ್ದಲ್ಲ. ಹಿಂದೆ ೨೮-೧-೮೭ ರಲ್ಲಿ ಅಮರಣಾಂತ ಉಪವಾಸ ಮಾಡಿದ್ದಾರೆ. ೨-೪-೮೭ ರಲ್ಲಿ ಉರುಳುಸೇವೆ ಮಾಡಿದ್ದಾರೆ. ೨-೭-೮೭ರಲ್ಲಿ ಆಗಿನ ಶಿಕ್ಷಣ ಸಚಿವರಾಗಿದ್ದವರು, ಮುಂದಿನ ಸಚಿವಸಂಪುಟದ ಸಭೆಯಲ್ಲಿ ಇವರನ್ನು ಖಾಯಂ ಮಾಡುವಂತಹ ನಿಲುವು ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನೂ ಕೂಡಾ ಹೇಳಿದ್ದರು. ಆದರೂ ಇನ್ನೂ ಇದರ ಬಗ್ಗೆ ತೀರ್ಮಾನ ಮಾಡದೇ ಇರುವುದನ್ನು ನೋಡಿದರೆ ನನಗೆ ಟಾಲ್‌ಸ್ಟಾಯ್‌ರವರ '' ಗಾಡ್ ಸೀಸ್ ದಿ ಟ್ರುಥ್ ಬಟ್ ವೇಟ್ಸ್ '' ಎಂಬ ಕಥೆಯ ನೆನಪಾಗುತ್ತದೆ. ಆ ಕಥೆಯಲ್ಲಿ ಬರುವ ವ್ಯಕ್ತಿ ನ್ಯಾಯಕ್ಕಾಗಿ ಎಲ್ಲಿಯವರೆಗೆ ಕಾಯುತ್ತಾನೆ ಎಂದರೆ, ಕೊನೆಗೆ ಅವನಿಗೆ ನ್ಯಾಯ ಸಿಗಬೇಕಾದರೆ, ಅವನು ಕೊಲೆ ಮಾಡದಿದ್ದರೂ ಕೂಡಾ, ಅವನು ಕೊಲೆ ಮಾಡಲಿಲ್ಲ ಎಂದು ಹೇಳಿ ಅವನ ಬಿಡುಗಡೆಯಾಗಿದೆ ಎಂದು ಜೈಲಿನಲ್ಲಿ ಬಂದು ಹೇಳಿದ್ದು, ಅವನು ಜೀವಂತ ಇದ್ದಾಗ ಅಲ್ಲ, ಅವನ ಹೆಣದ ಮೇಲೆ ಹೇಳುವಂತಹ ಪರಿಸ್ಥಿತಿ ಬರುತ್ತದೆ. ಇದೇ ನಿಲುವನ್ನು ನೀವು ತಳೆಯದೇ, ಅವರು ಬದುಕಿದ್ದಾಗಲೇ ಖಾಯಂಗೊಳಿಸಿ ವಿಳಂಬ ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ.

ಎಲ್ಲಿಯವರೆವಿಗೂ ಅವರು ಕಾಯುತ್ತಾರೆ? ಅವರಿಗೆ ನಿಜವಾಗಿಯೂ ನ್ಯಾಯ ಕೊಡುವುದಾದರೆ ಅವರ ಬೇಡಿಕೆಗಳನ್ನು ಈಡೇರಿಸುವುದಾದರೆ ಅವರು ಜೀವಂತವಿರುವಾಗಲೇ ಅವರಿಗೆ ನ್ಯಾಯ ದೊರಕಿಸಿಕೊಡಿ ಇಲ್ಲದಿದ್ದರೆ ಅವರು ನರಳೀ ನರಳೀ ಸತ್ತ ಮೇಲೆ ಅವರಿಗೆ ತಾವು ನ್ಯಾಯ ದೊರಕಿಸಿಕೊಟ್ಟರೆ ಏನು ಪ್ರಯೋಜನ ? ಪದವೀಧರರಾಗಿರತಕ್ಕಂಥವರು ವಿದ್ಯಾವಂತರು. ಇಂತಹವರ ಸೇವೆಯನ್ನು ಖಾಯಂ ಮಾಡಬೇಕೆನ್ನುವ ಮನಸ್ಸು ಸರ್ಕಾರಕ್ಕೆ ಇದೆ. ಆದರೂ ಸಹ ಇಷ್ಟೊಂದು ವಿಳಂಬವೇತಕ್ಕೆ? ವಿಳಂಬ ಮಾಡುವ ಅವಶ್ಯಕತೆಯಾದರೂ ಏನಿದೆ ? ಅವರನ್ನು ನೇಮಕಾತಿ ಮಾಡಿಕೊಳ್ಳುವಾಗ ತಾವು ಎಲ್ಲಾ ನಿಯಮಗಳನ್ನು ಅನುಸರಿಸಿದ್ದೀರಿ. ಆದ್ದರಿಂದ ಅವರ ನೇಮಕಾತಿಯನ್ನು ಈಗ ಖಾಯಂ ಮಾಡಲು ಯಾವ ಕಾನೂನು ಅಡಚಣೆ ಬರುವುದಿಲ್ಲ. ಅಂತಹ ಸಮಸ್ಯೆ ಏನಾದರೂ ಇದ್ದರೆ ಅದನ್ನು ಸರ್ಕಾರ ಮನಸ್ಸು ಮಾಡಿದರೆ ಸರಿ ಮಾಡಬಹುದು. ಬಾಯಿಯಲ್ಲಿ ಬಿಸಿ ತುಪ್ಪ ಇಟ್ಟುಕೊಂಡು ಏತಕ್ಕೆ ಇದ್ದೀರಿ. ಇಷ್ಟವಾದರೆ ಬಿಸಿ ತುಪ್ಪವನ್ನು ನುಗಿಬಿಡಿ. ಇಲ್ಲದಿದ್ದರೆ ಉಗುಳಿ. ಈ ಸಂದರ್ಭದಲ್ಲಿ ನಾನು ಸನ್ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ. ಈ ಉಪನ್ಯಾಸದಲ್ಲಿ ಕೆಲವರಿಗೆ ೪೦-೪೮ ವರ್ಷ ವಯಸ್ಸಾಗಿದೆ. ಅದರಲ್ಲಿ ಕೆಲವರಿಗೆ ಹೆದರಿಕೆಯಾಗಿದೆ. ಅವರ ಕುಟುಂಬದಲ್ಲಿ ಯಾವುದೋ ಒಂದು ಹೆಣ್ಣು ಮಗಳು ಇದ್ದಳು, ಪಾಪ ನಮ್ಮ ಹುಡುಗ ಉಪಾಧ್ಯಾಯರ ಕೆಲಸದಲ್ಲಿ ಇದ್ದಾನೆ ಅವನಿಗೆ ಇವತ್ತಲ್ಲ ನಾಳೆ ಖಾಯಂ ಆಗುತ್ತದೆ. ಆದ್ದರಿಂದ ನಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿಬಿಡೋಣವೆಂದು ಹೇಳಿ ಮದುವೆಯನ್ನು ಸಹ ಮಾಡಿಕೊಂಡಿದ್ದಾರೆ. ಅಂತಹವರು ಇದುವರೆವಿಗೂ ಖಾಯಂ ಆಗದೆ ಇರುವುದನ್ನು ನೋಡಿ ಬೇಸತ್ತು ಹೋಗಿದ್ದಾರೆ. ಈ ಉಪನ್ಯಾಸಕರ ಬೇಡಿಕೆಯನ್ನು ಸರ್ಕಾರ ತೀವ್ರವಾಗಿ ಪರಿಗಣಿಸಬೇಕೆಂದು ನಾನು ಆಗ್ರಹ ಪೂರ್ವಕವಾಗಿ ಒತ್ತಾಯ ಮಾಡುತ್ತೇನೆ. ಇದಕ್ಕಿಂತ ಹೆಚ್ಚು ಏನನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ನೌಕರರಿಗೆ

ಖಾಯಂ ಸರ್ಕಾರಿ ನೌಕರರಿಗೆ ಕೊಡುವಂತಹ ಮೂಲ ವೇತನದಲ್ಲಿ ೧೦ ರೂಪಾಯಿಗಳನ್ನು ಮುರಿದು ಕೊಂಡು ಉಳಿದ ಸಂಬಳ ಕೊಡುತ್ತಿದ್ದಾರೆ. ತದನಂತರ ನೂತನ ವೇತನ ಆಯೋಗದವರು ಏನೊಂದು ಶಿಫಾರಸ್ ಮಾಡಿದ್ದಾರೆ, ಆ ವೇತನ ಶ್ರೇಣಿಯನ್ನು ಈ ನೌಕರರಿಗೂ ಕೊಡಬೇಕೆಂದು ನಾನು ಅತ್ಯಂತ ಆಗ್ರಹಪೂರ್ವಕವಾಗಿ ಒತ್ತಾಯ ಮಾಡುತ್ತೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸ್ಪಷ್ಟಪಡಿಸಬೇಕೆಂದು ಸಹ ಕೇಳಿಕೊಳ್ಳುತ್ತೇನೆ. ಈ ಗುತ್ತಿಗೆ ಶಿಕ್ಷಕರಿಗೆ ಯಾವುದೇ ರೀತಿಯಿಂದ ಅನ್ಯಾಯ ಮಾಡಬಾರದೆಂದು ನನ್ನ ನಮ್ರತೆಯ ಮನವಿ. ಈ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಹೇಳಿ ಇದುವರೆವಿಗೂ ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಇಲ್ಲಿ ಉದ್ಭವವಾಗಿರತಕ್ಕಂಥ ಸಮಸ್ಯೆಯ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಾನು ಮತ್ತೊಮ್ಮೆ ಅದನ್ನೆ ಒತ್ತಿಹೇಳುವುದಕ್ಕೆ ಹೋಗುವುದಿಲ್ಲ. ಬಹುಶಃ ವಿರೋಧಪಕ್ಷದವರು ಮಾಡಬೇಕಾದ ಕರ್ತವ್ಯವನ್ನು ಇಲ್ಲಿ ಮಾಡುತ್ತಿದ್ದಾರೆಂದು ಮಾನ್ಯ ಮಂತ್ರಿಗಳು ತಿಳಿಯಬಾರದು. ಈ ಕೆಲಸವನ್ನು ಬರೀ ವಿರೋಧ ಪಕ್ಷದ ಸದಸ್ಯರೆ ಮಾಡಿಲ್ಲ. ಆ ಕಡೆಯ ಸದಸ್ಯರೂ ಸಹ ಮಾಡಿದ್ದಾರೆಎಲ್ಲರಿಗೂ ಈ ಗುತ್ತಿಗೆ ಶಿಕ್ಷಕರ ಬಗ್ಗೆ ಕಳಕಳಿ ಇದೆ. ಆದೇ ರೀತಿ ಸರ್ಕಾರ ಕೂಡ ಕಳಕಳಿಯನ್ನು ವ್ಯಕ್ತಪಡಿಸಬೇಕು. ಹಿಂದೆ ಈ ಗುತ್ತಿಗೆ ಶಿಕ್ಷಕರು ಮುಷ್ಕರವನ್ನು ಮಾಡಿದಾಗ ಆಗ ಇದ್ದಂತಹ ಮಾನ್ಯ ಶಿಕ್ಷಣ ಸಚಿವರು ಅವರನ್ನು ಖಾಯಂ ಮಾಡಿಕೊಳ್ಳುತ್ತೇವೆಂದು ಭರವಸೆ ನೀಡಿದ್ದರು. ಆದರೆ ಇದುವರೆಗೂ ಆ ಕೆಲಸವಾಗಿಲ್ಲ. ರೋಸ್ಟರ್ ಪದ್ಧತಿಯನ್ನು ಅನುಸರಿಸಿ ಈ ವಿಷಯವನ್ನು ನಾವು ಮಂತ್ರಿ ಮಂಡಲದ ಮುಂದೆ ತಂದು ಅನುಕೂಲ ಮಾಡಿಕೊಡುತ್ತೇವೆಂದು ಸ್ಪಷ್ಟ ಭರವಸೆಯನ್ನು ಕೊಟ್ಟಿದ್ದಾರೆ. ಅದು ರೆಕಾರ್ಡ್ ಸಹ ಆಗಿದೆ. ಇಂತಹ ಸಂದರ್ಭದಲ್ಲಿ ಇದನ್ನು ಕಡೆಗಣಿಸುವುದು ಅಷ್ಟು ಸರಿಯಾದುದು ಅಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು. ಈ ಗುತ್ತಿಗೆ ಶಿಕ್ಷಕರಿಗೆ ಮೂಲ ವೇತನದಲ್ಲಿ ೧೦ ರೂಪಾಯಿಗಳನ್ನು ಹಿಡಿದುಕೊಂಡು ಸಂಬಳ ಕೊಡುತ್ತಿದ್ದಾರೆ. ಆದರೆ ಇವರಿಗೆ ಹೊಸ ವೇತನ ಶ್ರೇಣಿಯನ್ನು ಕೊಡುತ್ತಿಲ್ಲ. ಆ ಹೊಸವೇತನ ಶ್ರೇಣಿಯಲ್ಲಿ ಸಂಬಳವನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಗುತ್ತಿಗೆ ಶಿಕ್ಷಕರನ್ನು ಖಾಯಂಗೊಳಿಸುವಲ್ಲಿ ಮಾನ್ಯ ಮಂತ್ರಿಗಳು ಮನಸ್ಸು ಮಾಡಿದರೆ ಆಗುತ್ತದೆ. ಇದರಲ್ಲಿ ಯಾರಿಗೂ ಪ್ರೆಸ್ಟಿಜ್ ಪ್ರಶ್ನೆ ಬೇಡ. ವಿರೋಧ ಪಕ್ಷದವರು ಹೇಳಿದ್ದರಿಂದ ಮಾಡಿದರು ಎಂದು ತಿಳಿದುಕೊಳ್ಳುವುದೇನೂ ಇಲ್ಲ. ಅದಕ್ಕಿಂತ ಮುಂಚಿತ ವಾಗಿಯೇ ನೀವು ಅವರನ್ನು ಖಾಯಂ ಮಾಡಬಹುದಿತ್ತು ಇನ್ನು ಮೇಲಾದರೂ ಈ ಗುತ್ತಿಗೆ ಶಿಕ್ಷಕರನ್ನು ಖಾಯಂ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತು ನನಗೆ ಒಂದು ವಿಷಯ ಮಾತ್ರ ಬಹಳ ನೋವು ಉಂಟು ಮಾಡಿತು ಅದೇನೆಂದರೆ ಆ ಹೆಣ್ಣು ಮಕ್ಕಳನ್ನೂ ಸಹ ಅರೆಸ್ಟ್ ಮಾಡಿದ್ದು. ಇದು ಅಕ್ಷಮ್ಯ ಅಪರಾಧ. ದಯವಾಡಿ ಅರೆಸ್ಟ್ ಮಾಡಿಕೊಂಡು ಹೋಗಿರುವವರನ್ನು ಬಿಟ್ಟು ಬಿಡಿ, ಸನ್ಮಾನ್ಯ ಜೀವರಾಜ ಆಳ್ವರವರು ಅವರ ಹತ್ತಿರ ಹೋದಂತಹ ಸಮಯದಲ್ಲಿ, ಅವರು ಮಾತನಾಡುವುದಕ್ಕೆ ಅವಕಾಶ ಕೊಡದೇ ಇರಬಹುದು. ಆಗ ಅವರ ಮನಸ್ಸು ಯಾವ ರೀತಿ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅವರು ಮಾಡಿರುವ ವಿಷಯವನ್ನು ಒಂದು ದೊಡ್ಡ ರೀತಿಯ ಅಪರಾದವೆಂದು ತಿಳಿಯುವ ಅವಶ್ಯಕತೆ ಇಲ್ಲ. ಮಾನ್ಯ ಚಾಲಪ್ಪನವರು, ಶಿಕ್ಷಕರು ಗಲಾಟೆ ಮಾಡಿದರೆಂದು ಅವರನ್ನು ಜೈಲಿಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಅಕಸ್ಮಾತ್ ಸಣ್ಣಪುಟ್ಟ ಘಟನೆಗಳು ನಡೆದಿರ ಬಹುದು. ಆದನ್ನೇ ದೊಡ್ಡದು ಮಾಡಿಕೊಂಡು ಅವರುಗಳನ್ನು ಪೋಲೀಸ್ ವ್ಯಾನ್‌ನಲ್ಲಿ ತುಂಬಿಕೊಂಡು ಹೋಗುವುದು ಸರಿಯಲ್ಲ ಅದ್ದರಿಂದ, ಯಾರನ್ನು ಅರೆಸ್ಟ್ ಮಾಡಿಕೊಂಡು ಹೋಗಿದ್ದೀರೋ ಅವರು ಗಳನ್ನು ಕೂಡಲೇ ಬಿಡುಗಡೆ ಮಾಡಬೇಕು. ಸತ್ಯಾಗ್ರಹ ಮಾಡುತ್ತಿರುವ ಶಿಕ್ಷಕರ ಹತ್ತಿರ ಮಾನ್ಯ ಮಂತ್ರಿಗಳು ಹೋಗಿ ಈಗ ಅರೆಸ್ಟ್ ಮಾಡಿರುವ ಶಿಕ್ಷಕರನ್ನು ಬಿಡುಗಡೆ ಮಾಡುತ್ತೇವೆ ಹಾಗು ನಿಮ್ಮ ಬೇಡಿಕೆಯನ್ನು ಪ್ರಾಮಾಣಿಕವಾಗಿ ಈಡೇರಿಸುತ್ತೇವೆಂದು ಹೇಳಿ ಅವರ ಸತ್ಯಾಗ್ರಹವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ)—ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದರ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಬೆಳಕು ಚೆಲ್ಲಿದ್ದಾರೆ. ನಾನು ಪುನಃ ಅದನ್ನೇ ಹೇಳುವುದಕ್ಕೆ ಹೋಗುವುದಿಲ್ಲ. ಕೆಲವನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ

ಶಿಕ್ಷಕರನ್ನು ಖಾಯಂ ಮಾಡುತ್ತೇವೆ ಎನ್ನುವ ತತ್ವವನ್ನು ಈ ಹಿಂದೆ ಶಿಕ್ಷಣ ಸಚಿವರಾಗಿದ್ದ ಮಾನ್ಯ ಮಂಜುನಾಥ್‌ರವರು ಒಪ್ಪಿಕೊಂಡಿದ್ದರು ಅವರು ಈಗ ಕೆಲಸ ಮಾಡುತ್ತಿರುವ ಗುತ್ತಿಗೆ ಶಿಕ್ಷಕರನ್ನು ಯಾವುದೇ ಕಾರಣಕ್ಕೂ ಕೆಲಸದಿಂದ ತೆಗೆಯುವುದಿಲ್ಲವೆಂದು ಹೇಳಿದ್ದರು. ಜೊತೆಗೆ ಅವರನ್ನು ಖಾಯಂ ಮಾಡುತ್ತೇವೆಂದು ಸಹ ಹೇಳಿದ್ದರು. ಹಾಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಶಿಕ್ಷಕರಲ್ಲದೇ ಇನ್ನೂ ೨೭ ಸಾವಿರ ಜನ ಶಿಕ್ಷಕರನ್ನು ನಾವು ಅಪಾಯಿಂಟ್ ಮಾಡಿಕೊಳ್ಳುತ್ತೇವೆ. ಈಗಿರುವವರನ್ನು ಮಾತ್ರ ಮನೆಗೆ ಕಳುಹಿಸುವುದಿಲ್ಲವೆಂದು ಹೇಳಿರುವುದು ನಮಗೂ ಗೊತ್ತಿದೆ. ಎಲ್ಲರಿಗೂ ಗೊತ್ತಿದೆ. ಅಂದರೆ ಅವರುಗಳನ್ನು ಖಾಯಂ ಮಾಡುವ ತತ್ವವನ್ನು ಸರ್ಕಾರ ಒಪ್ಪಿಕೊಂಡಿದೆ ಎಂದಾಯಿತು. ಈಗ ಈ ತತ್ವವನ್ನು ಬದಲಾವಣೆ ಮಾಡಿಕೊಂಡಿದ್ದೀರೋ ಏನೋ ಗೊತ್ತಿಲ್ಲ. ಹಿಂದೆ ಮಾನ್ಯ ಮಂಜುನಾಥ್ ರವರು ಗುತ್ತಿಗೆ ಶಿಕ್ಷಕರನ್ನು ಖಾಯಂ ಮಾಡಲಾಗುತ್ತದೆ ಎಂದು ಹೇಳಿದ ಮಾತನ್ನೇ ನೀವು ಸಹ ಹೇಳಬಹುದಾಗಿತ್ತು. ಆದರೆ, ನೀವು ಆ ತರಹ ಹೇಳಲಿಲ್ಲ. ಖಾಯಂ ಆದವರಿಗೆ ಯಾವ ರೀತಿ ಸಂಬಳ ಕೊಡುತ್ತಿದ್ದೀವೆಯೋ ಅದೇ ಸಂಬಳವನ್ನು ಈ ಕೂಡಲೇ ನಿಮಗೆ ಕೊಡುತ್ತೇವೆ. ಇನ್ನು ೬ ತಿಂಗಳು ಸಮಯ ಕೊಟ್ಟರೆ ಖಾಯಂ ಮಾಡುವ ಬಗ್ಗೆ ಅಂತಿಮ ತೀರ್ಮಾನವನ್ನು ಮಾಡುತ್ತೇವೆಂದು ಹೇಳಿದ್ದರೆ ಸಮಸ್ಯೆ ಕೂಡಲೇ ಇತ್ಯರ್ಥವಾಗಿಬಿಡುತ್ತಿತ್ತು. ಆದು ಬಿಟ್ಟು ನಾವು ಈವಾಗ ಇದರ ಬಗ್ಗೆ ಯೋಚನೆ ಮಾಡುತ್ತೇವೆಂದರೆ ಹೇಗೆ? ಯಾರೇ ಆಗಲೀ. ಇದನ್ನು ಒಪ್ಪಿಕೊಳ್ಳತಕ್ಕ ವಿಷಯವಲ್ಲ. ಮಾನ್ಯ ಬಂಗಾರಪ್ಪನವರು ಸಹ ಇದರ ಬಗ್ಗೆ ಮಾತನಾಡುತ್ತಾ ಇವರುಗಳನ್ನು ರೋಸ್ಟರ್ ಪದ್ಧತಿ ಮೂಲಕವೇ ಅಪಾಯಿಂಟ್ ಮಾಡಿಕೊಂಡಿರುವಾಗ ಯಾವುದೇ ತರಹ ಸಮಸ್ಯೆಗಳು ಖಾಯಂ ಮಾಡುವ ಬಗ್ಗೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಮಾನ್ಯ ಭೂಪತಿಯವರೂ ಸಹ ಇವರುಗಳನ್ನೆಲ್ಲಾ ರೋಸ್ಟರ್ ಪದ್ಧತಿಗೆ ಅನುಗುಣವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆಯೆಂದು ಒತ್ತಿ ಒತ್ತಿ ಹೇಳಿದ್ದಾರೆ. ಆದ್ದರಿಂದ, ಖಾಯಂ ಮಾಡುವುದಕ್ಕೆ ಯಾವುದೇ ರೀತಿಯ ಆತಂಕ ಸರ್ಕಾರಕ್ಕೆ ಇರುವುದಿಲ್ಲವೆಂದು ಗೊತ್ತಾಗುತ್ತದೆ. ಇಷ್ಟೆಲ್ಲಾ ನಿಯಮದ ಪ್ರಕಾರ ನೇಮಕ ಮಾಡಿಕೊಂಡಿರುವಾಗ ಖಾಯಂ ಮಾಡುವುದಕ್ಕೆ ಏತಕ್ಕೆ ಆಗುವುದಿಲ್ಲ ಎನ್ನುವುದನ್ನು ನಾವು ಕೇಳಬೇಕಾಗುತ್ತದೆ. ಗುತ್ತಿಗೆ ಶಿಕ್ಷಕರು ಸುಪ್ರೀಮ್ ಕೋರ್ಟ್‌ನಲ್ಲಿ ಕೇಸ್ ಹಾಕಿರುವುದರಿಂದ ಸರ್ಕಾರ ಮಧ್ಯೆ ಪ್ರವೇಶ ಮಾಡುವುದಕ್ಕಾಗುವುದಿಲ್ಲ ಎನ್ನುವ ನಿಮ್ಮ ವಾದವಾದರೆ, ಅವರು ಯಾವ ಕಾರಣಕ್ಕಾಗಿ ಸುಪ್ರೀಮ್ ಕೋರ್ಟಿಗೆ ಕೇಸ್ ಹಾಕಿದ್ದಾರೆ? ನಮ್ಮನ್ನು ರಾಜ್ಯ ಸರ್ಕಾರ ಖಾಯಂ ಮಾಡಬೇಕು ಎನ್ನುವ ಉದ್ದೇಶದಿಂದಲೇ ಅವರು ಸುಪ್ರೀಮ್ ಕೋರ್ಟಿಗೆ ಕೇಸ್ ಹಾಕಿದ್ದಾರೆ, ನೀವು ಅವರುಗಳನ್ನು ಖಾಯಂ ಮಾಡಿದ ತಕ್ಷಣ ಆ ಕೇಸ್ ಹೊರಟುಹೋಗುತ್ತದೆ. ನೀವು ಅವರನ್ನು ಕನ್‌ಫರ್ಮ್ ಮಾಡಿದ ತಕ್ಷಣ ಎಲ್ಲಾ ಸಮಸ್ಯೆಗಳು ಕೂಡಲೇ ಇತ್ಯರ್ಥವಾಗುತ್ತವೆ. ಹೋದ ವರ್ಷ ಇದೇ ರೀತಿ ೮೭ ಜನ ಗುತ್ತಿಗೆ ಉಪನ್ಯಾಸಕರನ್ನು ಕೆಲಸದಿಂದ ತೆಗೆದುಹಾಕಿದ್ದಾಗ, ಅವರುಗಳು ಸಹ ಸುಪ್ರೀಮ್ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದರು. ಅವರನ್ನು ವಾಪಸ್ ಕೆಲಸಕ್ಕೆ ರಾಜ್ಯ ಸರ್ಕಾರದವರು ತೆಗೆದುಕೊಂಡ ಮೇಲೆ ತಕ್ಷಣ ಸುಪ್ರೀಮ್ ಕೋರ್ಟ್‌ನಲ್ಲಿರುವ ಕೇಸ್ ನಿಂತು ಹೋಯಿತು. ಆ ೮೭ ಜನ ಕಾಲೇಜು ಶಿಕ್ಷಕರನ್ನು ನೀವು ಟರ್ಮಿನೇಟ್ ಮಾಡಿದ್ದಾಗ ಅವರು ಹಂಗರ್ ಸ್ಟ್ರೈಕ್ ಮಾಡಿದ್ದರು. ಸದನದಲ್ಲಿ ಅದರ ಬಗ್ಗೆ ಪ್ರಸ್ತಾಪವಾದ ಮೇಲೆ ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲಾಯಿತು. ಅವರನ್ನು ಕೆಲಸಕ್ಕೆ ತೆಗೆದುಕೊಂಡು ನೀವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ.

ಶ್ರೀ ಪಿ. ಎಂ.

ಹೀಗಿರಬೇಕಾದರೆ, ಈ ವಿಚಾರದಲ್ಲಿ ಸುಪ್ರೀಂಕೋರ್ಟ್ ನಿಮಗೆ ಅಡ್ಡಿ ಆತಂಕ ಬರುವುದಕ್ಕೆ ಸಾಧ್ಯವೇ ಇಲ್ಲ, ಆಲ್ಲಿರುವಂಥಹ ವಿಷಯವೂ ಇದೇ. ಈ ವಿಷಯವನ್ನು ನೀವು ಇತ್ಯರ್ಥ ಮಾಡಿದ್ದರೆ ಯಾವ ತೊಂದರೆ ಬರುವುದಕ್ಕೆ ಸಾಧ್ಯವಿಲ್ಲ. ತಮಗೆ ಇನ್ನೊಂದು ಪ್ರಶ್ನೆ ಇದ್ದರೂ ಇರಬಹುದು. ತಾವುಗಳು ಆರು ತಿಂಗಳುಗಳ ಸಮಯ ತೆಗೆದುಕೊಂಡಿದ್ದೀರಿ ತಾವುಗಳು ಜಿಲ್ಲಾ ಪರಿಷತ್ತುಗಳನ್ನು ವಿಸರ್ಜನೆ ಮಾಡಿದ್ದೀರಿ, ಅವುಗಳಿಗೆ ಇವೊತ್ತಿನ ದಿವಸ ಅಧಿಕಾರವನ್ನು ಕೊಟ್ಟುಬಿಟ್ಟರೆ ಅವರಿಂದ ಈ ಕೆಲಸವನ್ನು ಮಾಡಿಸಬೇಕೆಂಬ ಅಭಿಪ್ರಾಯ ಸರಕಾರಕ್ಕೆ ಇದೆ. ನೇಮಕಾತಿ ಸಮಿತಿಗಳನ್ನು ಮಾಡಿ ಅವರಿಗೆ ಅಧಿಕಾರಗಳನ್ನು ಕೊಟ್ಟು ಬಿಡಬೇಕೆಂಬ ಒಂದು ಅಭಿಪ್ರಾಯ ಸರಕಾರಕ್ಕೆ ಇರಬಹುದು. ಆದರೆ ಇವರ ವಿಷಯಕ್ಕೆ ಅದು ಬರುವುದಿಲ್ಲ. ಏಕೆಂದರೆ ನೇಮಕಾತಿ ಎಂದರೆ ಏನಂ ಅರ್ಥ ? ಅರ್ಹತೆ ಇರಬೇಕು, ಇಷ್ಟು ವಯಸ್ಸು ಆಗಿರಬೇಕು. ಎಂಬ ನಿಯಮದ ಪ್ರಶ್ನೆ ಬರುತ್ತದೆ

ಈ ಜನರ ವಿಚಾರದಲ್ಲಿ ಏನಾಗಿದೆ ಅಂದರೆ ಇವರೆಲ್ಲರೂ ಗುತ್ತಿಗೆ ಶಿಕ್ಷಕರಾಗಿ ಮೂರು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ರೋಸ್ಟರ್ ಸಿಸ್ಟಮ್ ಆಧಾರದ ಮೇಲೆಯೇ ಇವರನ್ನು ಆಗ ಆಯ್ಕೆ ಮಾಡಿದ್ದರು ಜೊತೆಯಲ್ಲಿ ಅನೇಕರಿಗೆ ೩೦ ವರ್ಷಗಳ ವಯೋಮಿತಿಯು ಕೂಡ ವಿಧಿಸಿರುತ್ತದೆ, ಇನ್ನು ಎಸ್. ಸಿ. ಎಸ್. ಟಿ.ಯವರು ಏನಿದ್ದಾರೆ, ಅವರಿಗೆ ಅರ್ಹತೆ ಇದೆಯೋ ಇಲ್ಲವೊ ಏನೆಂದು ನನಗೆ ಗೊತ್ತಿಲ್ಲ, ಅವರಿಗೆ ಕನ್‌ಸೆಷನ್ ಕೊಟ್ಟಿದ್ದೀರಿ. ಅದು ಒಳ್ಳೆಯ ಕೆಲಸ ಈಗ ನೀವು ಪುನಃ ನೇಮಕಾತಿ ಮಾಡಿದರೆ, ಆ ಅಧಿಕಾರವನ್ನು ಜಿಲ್ಲಾಪರಿಷತ್‌ನವರಿಗೆ ಕೊಟ್ಟರೆ, ಖಂಡಿತವಾಗಿಯೂ ಅನೇಕರಿಗೆ ಅನ್ಯಾಯ ವಾಗುತ್ತದೆ. ಹಾಗೆ ಮಾಡಿದಲ್ಲಿ, ಇರುವಂತಹ ಗುತ್ತಿಗೆ ಶಿಕ್ಷಕರನ್ನು ಹೊರಗಟ್ಟಿ, ಅವರಿಗೆ ಬೇಕಾದವರನ್ನು, ಮತ್ತು ಆಳ್ವಿ ಕೆಲವು ಹಿತಾಸಕ್ತಿಗಳಿಗೆ ಅನುಗುಣವಾಗಿ, ಅಂತಹವರನ್ನು ತಮಗೆ ಬೇಕಾದಂತೆ ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಅದರ ಕಡೆಗೆ ಯೋಚನೆ ಮಾಡದೇ, ಇರುವವರನ್ನು ಹಾಗೆಯೇ ಖಾಯಂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಈ ಕಾಂಟ್ರಾಕ್ಟ್ ಪದ್ಧತಿ ಏನು ಇವೊತ್ತಿನ ದಿವಸ ಇದೆ ಅದು ಒಳ್ಳೆಯ ಪದ್ಧತಿ ಅಲ್ಲ. ಇದನ್ನು ನಾನು ಹೇಳಿದ್ದೇನೆ. ಹಿಂದೆ ಮಾನ್ಯ ಮಂಜುನಾಥ್‌ರವರು ಕೂಡ ಹೇಳಿದ್ದರು.

ಅಧ್ಯಕ್ಷರೇ ನಮ್ಮ ದೇಶದಲ್ಲಿ ಈ ಪದ್ಧತಿ ಬಗ್ಗೆ ಚರ್ಚೆಯಾಗಿದೆ. ಆದರೂ ಕೂಡ ಕಾರ್ಮಿಕರ ಬಗ್ಗೆ ಇದು ದುರದೃಷ್ಟವಶಾತ್ ಹಾಗೆಯೇ ಇದೆ. ಅಂತೆಯೇ ಆ ಸಿಸ್ಟಮ್‌ಗೂ, ಈ ಸಿಸ್ಟಮ್‌ಗೂ ಯಾವ ವ್ಯತ್ಯಾಸವೂ ಇಲ್ಲ. ಅಲ್ಲಿಯೂ ಕೂಡ ಕಡಿಮೆ ಸಂಬಳ ಕೊಟ್ಟು ಅವರಿಗೆ ಯಾವ ಅನುಕೂಲಗಳನ್ನು ಸರಿಯಾಗಿ ಕೊಡಬೇಕೆ ಬೇಕಾದಾಗ ತೆಗೆದುಕೊಂಡು ದುಡಿಸಿಕೊಳ್ಳುವುದು, ಬೇಡವಾದಾಗ ಬಿಟ್ಟುಬಿಡುವುದು ಹೀಗೆ ನಡೆದಿದೆ, ಇದು ಸರಿಯಾದುದು ಅಲ್ಲ. ಇದು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ. ಇಲ್ಲಿಯೂ ಕೂಡ ಒಂದು ರೀತಿಯಲ್ಲಿ ಅನ್ಯಾಯವಾಗಿದೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಒಂದು ತೀರ್ಮಾನವನ್ನು ಕೊಟ್ಟಿದೆ. ಈ ವಿಚಾರದಲ್ಲಿ Contract System Abolition and Regulation Act. ಎಂದು ಒಂದು ಆಕ್ಟ್ ಕೂಡ ಮಾಡಿದ್ದಾರೆ, ಅದು ಕಾರ್ಮಿಕರಿಗೆ ಅನ್ಯಾಯ ವಾಗುತ್ತದೆ. ಇದರ ಪ್ರಿನ್ಸಿಪಲ್ ಮತ್ತು ತಿರುಳು ಏನೆಂದರೆ ಈ ಕಾಂಟ್ರಾಕ್ಟ್ ಸಿಸ್ಟಮ್ ಇರಕೂಡದು ಎಂದು ಆಗಿದೆ. ಆದುದರಿಂದ ಇದು ಅನ್ಯಾಯವಾದುದು ಎನ್ನುವಂತಹ ತತ್ವವನ್ನು ಒಪ್ಪಿಕೊಂಡು ಈ ರೀತಿಯಾದ ಶಾಸನವನ್ನು ಅವರು ಮಾಡಿರಬೇಕಾದರೆ, ತಾವು ಕೂಡ ಅದಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು. ಅದನ್ನು ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ. ತಾವುಗಳು ಜನರ ಸರಕಾರ ಜನತಾ ಸರಕಾರ, ಎಂದು ಹೇಳಿಕೊಳ್ಳುತ್ತಿದ್ದೀರಿ. ಜನರಿಗಾಗಿ ಅದನ್ನು ಒಪ್ಪಿಕೊಂಡು ಇವೊತ್ತು ಆ ಗುತ್ತಿಗೆ ಆಧಾರದ ಶಿಕ್ಷಕರು ಏನಿದ್ದಾರೆ ಅವರನ್ನು ಖಾಯಂ ಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಮಾನ್ಯ ಕೃಷ್ಣನ್‌ರವರೇ, ತಾವು ಮುಕ್ತಾಯ ಮಾಡಬೇಕು. ಈಗಾಗಲೇ ಈ ವಿಷಯದ ಬಗ್ಗೆ ಒಂದು ಗಂಟೆಯ ಕಾಲಕ್ಕೂ ಮಿಗಿ ಚರ್ಚೆಯಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೇ, ಇಲ್ಲಿ ವೇಕೆನ್ಸಿ ಪ್ರಶ್ನೆ ಬರುವುದಿಲ್ಲ. ವೇಕೆನ್ಸಿ ಬೇಕಾದಷ್ಟು ಇವೆ. ೨೭ ಸಾವಿರ ಈವಾಗ ಭರ್ತಿ ಮಾಡಿದ್ದರೂ ಕೂಡ. ಇನ್ನೂ ೧೬ ಸಾವಿರ ಹುದ್ದೆಗಳು ಖಾಲಿ ಇವೆ. ಇವರು ಇರುವುದು ಕೇವಲ ೧೦,೪೦೦ ಜನರು ಮಾತ್ರ. ಆದುದರಿಂದ ಸ್ಪಷ್ಟವಾಗಿ ತಾವುಗಳು ಇವರನ್ನು ಖಾಯಂ ಮಾಡುತ್ತೇವೆ ಎಂದು ಹೇಳಬೇಕು. ಬೇರೆ ರೀತಿಯಲ್ಲಿ ಹೇಳಿದರು. ಅದು ಸರಿಯಾಗುವುದಿಲ್ಲ ಮತ್ತು ನಾವುಗಳು ಒಪ್ಪಿಕೊಳ್ಳುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಬಿ. ಎ. ಉಪ್ಪಿನ್ (ಕುಂದಗೋಳ್).— ಸನ್ಮಾನ್ಯ ಸಭಾಪತಿಗಳೇ ನಮ್ಮ ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ೧೦,೪೦೦ ಜನ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದು ಅವರನ್ನು ಅವಷ್ಟು ಶೀಘ್ರವೇ ಖಾಯಂ ಮಾಡಬೇಕೆಂಬ ವಿಷಯವಾಗಿ ಈ ಮನೆಯ ಸದಸ್ಯರು ಅನೇಕರು ಸಮಸ್ಯೆಯ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ನಾನು ಅತಿಯಾಗಿ ಹೇಳುವುದಕ್ಕೆ ಹೋಗವಿದ್ದರೂ ಇವತ್ತು ನಮ್ಮ ನಾಡಿನ ನಾಳಿನ ನಾಯಕರನ್ನು ತಯಾರು ಮಾಡುವವರು ಶಿಕ್ಷಕರು. ಅಂತಹ ಪವಿತ್ರವಾದ ಗುರುತರವಾದ ಜವಾಬ್ದಾರಿ ಹೊತ್ತ ವ್ಯಕ್ತಿ ತನ್ನ ಕರ್ತವ್ಯವನ್ನು ಒಳ್ಳೆಯ ರೀತಿಯಿಂದ ದಕ್ಷತೆಯಿಂದ ನಿರ್ವಹಿಸ ಬೇಕಾದರೆ ಅವನು ಸಂಸಾರದ ಅನೇಕ ಜಂಜಾಟಗಳಿಂದ ಮುಕ್ತನಾದಾಗ ಸಾಧ್ಯ. ಅಂತಹ ಅವಕಾಶ ವನ್ನು ಕಲ್ಪಿಸಿಕೊಡುವುದು ಸರ್ಕಾರದ ಮುಖ್ಯ ಕರ್ತವ್ಯ. ಈಗಾಗಲೇ ಈ ವಿಷಯದ ಬಗ್ಗೆ ಸಾಕಷ್ಟು ಜನ ಹೇಳಿರುವುದರಿಂದ ಮೊನ್ನೆಯ ದಿವಸ ಈ ವಿಷಯವಾಗಿ ಪ್ರಶ್ನೆ ಕೇಳಿದಾಗ ಸಚಿವರು ಉತ್ತರ

ಕೊಟ್ಟಿರುವುದನ್ನು ನೋಡಿ ನಿನ್ನೆ ದಿವಸ ನೂರಾರು ಜನ ಗುತ್ತಿಗೆ ಆಧಾರದ ಶಿಕ್ಷಕರು ನನ್ನಲ್ಲಿಗೆ ಬಂದಾಗ ನಿಜಕ್ಕೂ ಅವರನ್ನು ನೋಡಿ ವಿಸ್ಮಯಗೊಂಡೆ. ನಾವು ವಿದ್ಯಾರ್ಥಿಯಾಗಿದ್ದಾಗ ಶಿಕ್ಷಕರ ವೇಷ ಭೂಷಣಗಳನ್ನು ನೋಡಿದಾಗ ಗುರುಭಕ್ತಿಯ ಭಾವನೆ ಬರುತ್ತಿತ್ತು. ಆದರೆ ಗುತ್ತಿಗೆ ಆಧಾರದ ಶಿಕ್ಷಕರನ್ನು ನೋಡಿದರೆ ಅವರಿಗೆ ಪಾಪ ವೇಷ ಭೂಷಣಗಳ ಪರಿವೇಯೇ ಇಲ್ಲ, ಕೆಲವರು ಕೂದಲು ಇನ್ನು ಕೆಲವರು ಗಡ್ಡ ಬಿಟ್ಟಿರುವುದು ಕಂಡು ಬಂತು. ಅವರನ್ನು ನೋಡಿದಾಗ ಕರಳು ಕಿತ್ತು ಬಂತು. ಆದ್ದರಿಂದ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಎಷ್ಟೇ ತೊಂದರೆ ಇರಲಿ ಆರ್ಥಿಕ ತೊಂದರೆಯೇ ಆಗಲಿ ಇದು ಸರ್ಕಾರ ಆಧ್ಯತೆ ಕೊಡಬೇಕಾದ ಕರ್ತವ್ಯ ಅದಕ್ಕಾಗಿ ಆದಷ್ಟು ತೀವ್ರವಾಗಿ ಅವರನ್ನು ಖಾಯಂ ಮಾಡುವ ವ್ಯವಸ್ಥೆ ಮಾಡುವುದರ ಜೊತೆಗೆ ತಮ್ಮ ಕುಂದುಕೊರತೆಗಳನ್ನು ಹೇಳಿಕೊಂಡ ಶಿಕ್ಷಕರನ್ನು ಜೈಲಿಗೆ ಕಳುಹಿಸಿರುವುದು ಅತ್ಯಂತ ವಿಷಾದಕರ. ಜನತಾ ಸರ್ಕಾರ ತನ್ನ ಕಾಲದಲ್ಲಿ ಶಿಕ್ಷಕರನ್ನು ಜೈಲಿಗೆ ಕಳುಹಿಸಿತು ಎನ್ನುವ ಅಪಾದನೆ ಹೊರುವುದು ಬೇಡ. ಅವರನ್ನು ಬಿಡಿಸಿ ಪೂರ್ಣ ಪ್ರಮಾಣ ಖಾಯಂ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಾನ್ಯ ಪ್ರಾಥಮಿಕ ಶಿಕ್ಷಕರು).— ಅಧ್ಯಕ್ಷರೇ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ಶಿಕ್ಷಕರ ಸಮಸ್ಯೆ ಬಗ್ಗೆ ಈಗಾಗಲೇ ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಹಾಕಿತ್ತಿದ್ದಾರೆ. ಮೇಲಿಂದ ಮೇಲೆ ಕೂಡ ಈ ಬಗ್ಗೆ ಸರ್ಕಾರ ಹೇಳಿಕೆಯನ್ನು ಕೊಟ್ಟಿದೆ. ಏನು ಸದಸ್ಯರು ಗುತ್ತಿಗೆ ಶಿಕ್ಷಕರ ಮೇಲೆ ಕಳಕಳಿ ವ್ಯಕ್ತಪಡಿಸಿದರೋ ಅಷ್ಟೇ ಕಳಕಳಿ ಅವರ ಮೇಲೆ ಸರ್ಕಾರಕ್ಕೂ ಇದೆ. ಅದರಿಂದನೇ ಅವರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವಾಗ ಅವರಿಗೆ ಯಾವ ತೊಂದರೆಯೂ ಮಾಡಲಿಲ್ಲ. ೩-೪ ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ಗುತ್ತಿಗೆ ಎಂದರೆ ಒಂದು ವರ್ಷದ ಮಟ್ಟಿಗೆ ಅವರನ್ನು ನೇಮಕ ಮಾಡುವ ಕರಾರು. ಆದರೂ ಸಹ ನಾವು ಅವರನ್ನು ಒಂದು ವರ್ಷಕ್ಕೂ ಹೆಚ್ಚಿಗೆ ಮುಂದುವರಿಸಿಕೊಂಡು ಬಂದಿದ್ದೇವೆ. ಇದರಿಂದ ಗೊತ್ತಾಗುತ್ತದೆ. ನಾವು ಇವರ ಬಗ್ಗೆ ಸಹಾನುಭೂತಿಯಿಂದ ವರ್ತಿಸುತ್ತಿದ್ದೇವೆ. ಮತ್ತು ಇವರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆಂದು. ಅದಕ್ಕೆ ಮತ್ತೊಂದು ಉದಾಹರಣೆ ನಾವು ಈಗಾಗಲೇ ಅನೇಕ ಸಂದರ್ಭಗಳಲ್ಲಿ ಹೇಳಿರುವಂತೆ ನೇಮಕಾತಿಗಳನ್ನು ಪ್ರಾಥಮಿಕ ಶಾಲೆಗಳಿಗೆ ಪ್ರೌಢಶಾಲೆಗಳಿಗೆ ಮತ್ತು ಕಿರಿಯ ಕಾಲೇಜುಗಳಿಗೆ ಮೇಸ್ಟ್ರುಗಳನ್ನು ನೇಮಿಸುವುದಕ್ಕಾಗಿ ರಚನೆ ಮಾಡಿದ್ದೇವೆಯಿಂದಲೆ ಖಾಯಂ ಗೊಳಿಸುವ ಕಾರ್ಯ ಪ್ರಾರಂಭವಾಗಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ ಒಟ್ಟು ಸುಮಾರು ೫೬೦೫. ಪ್ರೌಢಶಾಲೆಗಳಲ್ಲಿ ೪೫೯ ಖಾಲಿ ಹುದ್ದೆಗಳಿವೆ. ಅದರಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕವರು ಪ್ರಾಥಮಿಕ ಶಾಲೆಗಳಲ್ಲಿ ೩೭೨೬ ಉಪಾಧ್ಯಾಯರು. ಪ್ರೌಢಶಾಲೆಗಳಲ್ಲಿ ೩೫೬ ಹುದ್ದೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಈಗ ನೇಮಕ ಮಾಡುತ್ತಾ ಇರತಕ್ಕದ್ದು ಈ ಸಂಖ್ಯೆಯನ್ನು ಹೊರತುಪಡಿಸಿ ಅಂದರೆ ಪ್ರಾಥಮಿಕ ಶಾಲಾ ಶಿಕ್ಷಕರ ಒಟ್ಟು ಹುದ್ದೆಗಳು ೫೬೦೫ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವವರು ೩೭೨೬ ಅವರನ್ನು ಹೊರತುಪಡಿಸಿ ಮಿಕ್ಕ ಹುದ್ದೆಗಳಿಗೆ ನಾವು ಆರ್ಜಿಗಳನ್ನು ಕರೆದಿದ್ದೇವೆ. ಪ್ರೌಢಶಾಲೆಗಳಲ್ಲಿ ೪೫೯ ಖಾಲಿ ಹುದ್ದೆಗಳು ಇದ್ದರೆ, ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕ ೩೫೬ ಶಿಕ್ಷಕರನ್ನು ಹೊರತುಪಡಿಸಿ ಕೇವಲ ೧೦೩ ಹುದ್ದೆಗಳಿಗೆ ನೇಮಕ ಮಾಡುತ್ತಿದ್ದೇವೆ, ನಾವು ಅವರನ್ನು ಸ್ಥಳಾಂತರಿಸುತ್ತಿಲ್ಲ. ಅವರನ್ನು ನಾವು ಕೆಲಸದಿಂದ ಬಿಟ್ಟು ಹೋಗಿಯೆಂದು ಹೇಳುತ್ತಿಲ್ಲ. ಅವರನ್ನು ಖಾಯಂ ಮಾಡತಕ್ಕ ತಾತ್ವಿಕ ನಿಲುವನ್ನು ತೆಗೆದುಕೊಂಡಿದ್ದೇವೆ. ನೇಮಕ ಮಾಡುತ್ತಿರುವುದರಿಂದ ಅವರ ಹುದ್ದೆಗೆ ತೊಂದರೆಯಾಗುತ್ತದೆ, ಅವರನ್ನು ಮನೆಗೆ ಕಳುಹಿಸುತ್ತಾರೆ ಎನ್ನುವ ಸಂಶಯವನ್ನು ಇಟ್ಟುಕೊಳ್ಳಬೇಕಾಗಿಲ್ಲ. ಅವರನ್ನು ಖಾಯಂ ಮಾಡತಕ್ಕ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕಾಗಿದೆ. ಅದಕ್ಕೆ ಕೆಲವು ಕಾನೂನುಗಳ ಬದಲಾವಣೆ ಮಾಡಬೇಕಾಗುತ್ತದೆ. ನೇಮಕಾತಿ ನಿಯಮಗಳನ್ನು ಕೆಲವು ಬದಲಾವಣೆ ಮಾಡಬೇಕಾಗುತ್ತದೆ,

ಶ್ರೀ ಎಸ್. ಬಂಗಾರಪ್ಪ.—ರೋಸ್ಟರ್ ಸಿಸ್ಟಮ್‌ಗೆ ಒಳಪಟ್ಟಿರುತ್ತಾರೆ ತಾನೆ ?

ಶ್ರೀ ಬಿ.ಸೋಮಶೇಖರ್.—ಅದು ಇದ್ದೇ ಇರುತ್ತದೆ. It is one of the components. ಅದರ ಬಗ್ಗೆ ಸಂಶಯ ಪಡಬೇಕಾಗಿಲ್ಲ. ರೋಸ್ಟರ್‌ಗೆ ಒಳಪಟ್ಟಿರುತ್ತಾರೆ. ನೇಮಕಾತಿ ನಿಯಮ

ಗಳನ್ನು ಏತಕ್ಕೆ ಬದಲಾವಣೆ ಮಾಡಬೇಕೆಂದರೆ, ವಿಭಾಗೀಯ ಮಟ್ಟದಲ್ಲಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಸಮಿತಿ, ಜಿಲ್ಲಾಮಟ್ಟದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಸಮಿತಿ ಕಿರಿಯ ಕಾಲೇಜುಗಳ ಶಿಕ್ಷಕರ ನೇಮಕಾತಿ ಸಮಿತಿಗಳು ಇವೆ. ಆ ಸಮಿತಿಗಳ ನಿಯಮಾವಳಿಗಳಂ ಬೇರೆ ಬೇರೆಯಾಗಿವೆ. ಗುತ್ತಿಗೆ ಆಧಾರದ ಮೇಲೆ ತೆಗೆದು ಕೊಳ್ಳುವಾಗ ಇದ್ದಂತಹ ನಿಯಮಗಳೇ ಬೇರೆ ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ ಕೆಲವು ನಿಯಮಗಳು ಬದಲಾವಣೆಯಾಗಬೇಕಾಗಿದೆ. ಅದಕ್ಕೋಸ್ಕರ ಕಾಲಾವಕಾಶ ಬೇಕಾಗಿದೆ ಅದನ್ನು ಮಾಡಬೇಕಾದರೆ ಕಾನೂನು ಇಲಾಖೆಯ ಸಲಹೆ ಬೇಕಾಗುತ್ತದೆ, ಡಿಪಿಎಆರ್ ಅವರ ಸಲಹೆ ಬೇಕಾಗುತ್ತದೆ. ಎರಡೂ ಇಲಾಖೆಗಳ ಸಲಹೆಯನ್ನು ಪರೀಲನೆ ಮಾಡಿದ ಮೇಲೆ ಸಂಪುಟದ ನಿರ್ಧಾರ ಬೇಕಾಗುತ್ತದೆ. ತಮ್ಮ ತೀವ್ರವಾದ ಕಳಕಳಿ ಅರ್ಥವಾಗಿದೆ, ಆದಷ್ಟು ಶೀಘ್ರವಾಗಿ ನಿಯಮಗಳನ್ನು ತಿದ್ದುಪಡಿ ಮಾಡಿ, ಹೊಸ ನಿಯಮಗಳನ್ನು ಮಾಡಿ ಅವರನ್ನು ನೇಮಕ ಮಾಡತಕ್ಕ ಕೆಲಸವನ್ನು ಸರ್ಕಾರ ಮಾಡುತ್ತದೆ. ಆದ್ದರಿಂದ ಯಾರೂ ಬೆಂಗಳೂರಿಗೆ ಬಹಳ ದೂರದಿಂದ ಬಂದು ತೊಂದರೆ ಪಡಬೇಕಾಗಿಲ್ಲ. ಈಗ ಬಹಳ ದೂರದಿಂದ ಬೆಂಗಳೂರಿಗೆ ಬಂದಿದ್ದಾರೆ. ಅವರು ಪುನಃ ಅವರವರ ಕೆಲಸಗಳಿಗೆ ಹೋಗಲಿ, ಅವರವರ ಸ್ಥಳಗಳಿಗೆ ಹೋಗಿ ಕೆಲಸ ಮಾಡಲಿ. ಅವರ ಹಿತರಕ್ಷಣೆಯನ್ನು ಸರ್ಕಾರ ಮಾಡುತ್ತದೆ. ಅವರಿಗೆ ಆದಷ್ಟು ಶೀಘ್ರವಾಗಿ ಖಾಯಂ ಮಾಡುವ ಎಲ್ಲ ಅವಕಾಶಗಳು ಬರುವುದರಿಂದ ಆದಷ್ಟು ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಆದರ ಬಗ್ಗೆ ಹೆಚ್ಚಿನ ಚರ್ಚೆ ಬೇಕಾಗಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರ ಪೇ ಬಗ್ಗೆ ಹೇಳಿ.

ಶ್ರೀ ಬಿ. ಸೋಮಶೇಖರ್.—ಒಂದೇ ಸಾರಿ ಅವರನ್ನು ಖಾಯಂ ಮಾಡತಕ್ಕ ತೀರ್ಮಾನ ತೆಗೆದು ಕೊಳ್ಳುವಾಗ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಪೇಗಿಂತ ಮೊದಲು ಅವರ ಕೆಲಸ ಖಾಯಂ ಆಗಲಿ. ಅವರ ಜೀವನದಲ್ಲಿ ಒಂದು ಖಾಯಂ ಕೆಲಸ ಸಿಗಬೇಕು. ಸ್ಕೇಲ್ ಬಗ್ಗೆ ಮುಂದೆ ಬರುವುದರಿಂದ ಈ ವಿಷಯವನ್ನು ಇಲ್ಲಿಗೆ ಮುಗಿಸೋಣ. ನಾನು ಈ ಸದನದ ಮುಖಾಂತರ ಮನವಿ ಮಾಡಿಕೊಳ್ಳುತ್ತಿದ್ದೇನೆ. ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕ ಶಿಕ್ಷಕರು ಏನು ಮುಷ್ಕರ ಮಾಡುತ್ತಿದ್ದಾರೆ ಅವರು ತಮ್ಮ ತಮ್ಮ ಕೆಲಸಗಳಿಗೆ ಹಾಜರಾಗಲಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಒಂದು ಚಳುವಳಿಯನ್ನು ನಿಲ್ಲಿಸಬೇಕು, ಮತ್ತೆ ಅವರವರ ಕೆಲಸಗಳಿಗೆ ಹಾಜರಾಗಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಮಂಜುನಾಥ್‌ರವರು ಕೂಡಾ ಇದೇ ಮಾತನಾಡಿದ್ದರು, ''ಆದಷ್ಟು ಶೀಘ್ರವಾಗಿ'' ಮಾಡುತ್ತೇವೆ ಎಂದು ಹೇಳುತ್ತಲೇ ಇದ್ದರು. ಬರುವ ವಾರ ಕ್ಯಾಬಿನೆಟ್ ಸೇರುತ್ತದೆ, ಅವರ ಬಗ್ಗೆ ಚರ್ಚಿಸುತ್ತೇವೆ, ಎಂದು ಹೇಳುತ್ತಲೇ ಇದ್ದರು. ''ಆದಷ್ಟು ಶೀಘ್ರವಾಗಿ'' ಎಂದು ಹೇಳಿ ಒಂದು ಎರಡು ವರ್ಷ ಆಯಿತು. ಎಷ್ಟು ದಿವಸ ಎನ್ನುವುದನ್ನು ಹೇಳಿ.

ಅಧ್ಯಕ್ಷರು.—ಆದಷ್ಟು ಶೀಘ್ರವಾಗಿ.....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಓಹೋ, ನೀವು ಹೇಳಿಬಿಟ್ಟಿರಾ ;

ಶ್ರೀ ಬಿ. ಸೋಮಶೇಖರ್.—ನನ್ನ ಬಗ್ಗೆ.....

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂಜುನಾಥ್‌ರವರು ಕೆಟ್ಟವರು ಎಂದು ಯಾರು ಹೇಳುತ್ತಾರೆ? ಅವರು ಬಹಳ ಒಳ್ಳೆಯವರು. ಆದರೂ ಕೂಡಾ ಒಂದು ವರ್ಷ ಆಯಿತು. ಎಷ್ಟು ದಿವಸ ಎಂದು ಹೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಂದು ತಿಂಗಳಲ್ಲಿ, ಎರಡು ತಿಂಗಳಲ್ಲಿ ತೀರ್ಮಾನ ತೆಗೆದು ಕೊಳ್ಳುತ್ತೇವೆ ಎಂದು ಹೇಳಿ. ಇಲ್ಲದಿದ್ದರೆ ನಿಮ್ಮ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳಿ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಏಳೆಂಟು ಸಾವಿರ ಜನ ಬಂದು ಸತ್ಯಾಗ್ರಹ ಮಾಡುತ್ತಿದ್ದಾರೆ. ನೀವು ಅವರಿಗೆ ಒಂದು ವಿಷಯ ಹೇಳಿ ರಿಲೀಫ್ ಕೊಟ್ಟು ಕಳುಹಿಸಬಹುದಲ್ಲ ; ನಿಮ್ಮ ತತ್ವ ಏನು ಹತ್ತು ರೂಪಾಯಿಗಳ ಕಡಿಮೆ ಬೇಸಿಕ್ ಪೇ ಕೊಡಬೇಕು ಎಂದು ಇದೆ. ಈ ನಾಲ್ಕನೇ ವೇತನ ಆಯೋಗದ ಪ್ರಕಾರ ೧-೧-೮೭ ರಿಂದ ಅವರಿಗೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಟ್ಟು

ಡಿಫರೆನ್ಸ್ ಅಮೌಂಟ್ ಕೊಡುತ್ತೇವೆ ಎನ್ನುವ ಮಾತನ್ನಾದರೂ ಹೇಳಿ. ಶಿಕ್ಷಕರನ್ನು ಸರ್ಕಾರ ಮೈಮೇಲೆ ಹಾಕಿಕೊಳ್ಳುವುದು ಅಗತ್ಯ ಇಲ್ಲ. ೧-೧-೮೭ ರಿಂದ ಡಿಫರೆನ್ಸ್ ಅಮೌಂಟ್ ಕೊಡುತ್ತೇವೆ, ಒಂದು ತಿಂಗಳಲ್ಲಿಯೋ ಎರಡು ತಿಂಗಳಲ್ಲಿಯೋ ನಿರ್ಧಾರ ಕೈಗೊಳ್ಳುತ್ತೇವೆ, ನೀವು ಬರುವ ಅಗತ್ಯ ಇಲ್ಲ ಎಂದು ದಯವಾಡಿ ಅವರಿಗೆ ಹೇಳಿ.

ಶ್ರೀ ಯು. ಭೂಪತಿ.— ಮಂತ್ರಿಗಳು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಹಿಂದೆ ನಡೆದಿದ್ದೆಲ್ಲಾ ಬೇಡ, ಈಗ ಹೇಳುತ್ತಿದ್ದೇನೆ ಎಂದು ಹೇಳಿದರು. ಇದೇ ಸರ್ಕಾರದ ಮಂತ್ರಿಗಳೇ ಆಗಲೂ ಇದ್ದವರು. ಈಗ ಬೇರೆ ಮಾತನಾಡೋಣ ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಜೂನಿಯರ್ ಕಾಲೇಜಿಗೆ ಸಂಬಂಧಪಟ್ಟ ಉಪನ್ಯಾಸಕರುಗಳ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಶಿಕ್ಷಕರ ಸಂಘದ ಪದಾಧಿಕಾರಿಗಳು ಹೋಗಿ ಲಾಸ್ಟ್ ಕಮರ್ ಗೋಸ್ ಫಸ್ಟ್ ಎನ್ನುವ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಆ ತೀರ್ಮಾನದ ಪ್ರಕಾರ ೮೭ ಜನರನ್ನು ಟರ್ಮಿನೇಟ್ ಮಾಡಿದರು. ಈ ಒಂದು ವಿಚಾರ ಚರ್ಚೆ ಬಂದಾಗ ಮಂತ್ರಿಗಳು ಏನು ಹೇಳಿದರು ಎಂದರೆ ಅವರೇ ಒಪ್ಪಿಕೊಂಡು ಬಂದಿದ್ದಾರೆ, ಏನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. Ultimately within two months, Government has agreed for their demands. ಮತ್ತೆ ಅವನ್ನೇ ರೀ-ಇನ್‌ಸ್ಟೇಟ್ ಮಾಡಿದರು. ಅವರನ್ನು ಖಾಯಂ ಮಾಡುವ ಈಗಿನ ವ್ಯವಸ್ಥೆ ಏನು ಇದೆ, ಎಷ್ಟು ತಿಂಗಳು ಅದಕ್ಕೆ ಬೇಕು ಎಂದು ಬಿಡಿಸಿ ಹೇಳಿ.

ಶ್ರೀ ಬಿ. ಸೋಮಶೇಖರ್.—ಸಾಕಾದಷ್ಟು ಸ್ಪಷ್ಟವಾಗಿ ಹೇಳಿದ್ದೇನೆ. ಕೆಲವು ನಿಯಮಾವಳಿಗಳ ಪ್ರಕಾರ ತಿದ್ದುಪಡಿ ಆಗಬೇಕಾಗುತ್ತದೆ. ಇದು ಸ್ವಲ್ಪ ಪ್ರೊಸೀಜರ್ ವಿಷಯ ಆಗಿರುವುದರಿಂದ ಆದಷ್ಟು ಶೀಘ್ರವಾಗಿ ಮಾಡುತ್ತೇವೆ. ಹಿಂದೆ ವಿಳಂಬ ಆಗಿದಷ್ಟು ಆಷ್ಟು ವಿಳಂಬ ಮಾಡುವುದಿಲ್ಲ. ಈ ವಿಷಯದ ಬಗ್ಗೆ ಚಿಂತನೆ ಮಾಡಿ ಶೀಘ್ರವಾಗಿ ಮಾಡುತ್ತೇವೆ ಎಂದು ಹೇಳಿಂತ್ತೇನೆ.

ತಾತ್ವಿಕವಾಗಿ ಅವರನ್ನು ಖಾಯಂ ಮಾಡುವ ನಿರ್ಧಾರ ಸರ್ಕಾರ ಮಾಡಿದ್ದೇವೆ. ಅವರಿಗೆ ಏತಕ್ಕೆ ಇನ್ನು ಅನುಮಾನ ಬೇಕು ?

ಶ್ರೀ ಎಂ. ಎಸ್. ಕೃಷ್ಣನ್.—ಸ್ಪಷ್ಟವಾಗಿ ಹೇಳಿಬಿಡಿ. ಒಂದು ತಿಂಗಳಲ್ಲಿ ಖಾಯಂ ಮಾಡಂತ್ತೇವೆ ಎಂದು ಹೇಳಿ. ನಿಮಗೆ ದೊಡ್ಡ ದೊಡ್ಡ ರೆವಿನ್ಯೂ ಆಫೀಸರ್ಸ್ ಇದ್ದಾರೆ ಒಂದು ಆರ್ಡಿನೆನ್ಸ್ ಹೊರಡಿಸಬೇಕಾಗಿದ್ದರೆ ತಕ್ಷಣ ಆದನ್ನು ಹೊರಡಿಸಿಬಿಡುತ್ತೀರಿ. ಯಾರಿಗಾದರೂ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಆರ್ಡಿನೆನ್ಸ್‌ನ್ನು ಹೊರಡಿಸುತ್ತೀರಿ.....

ಇಷ್ಟೆಲ್ಲಾ ಮಾಡುವುದಕ್ಕೆ ಶಕ್ತಿ ಇರಬೇಕಾದರೆ ಇದಕ್ಕೆ ಆದಷ್ಟು ಬೇಗ ಎಂದು ಹೇಳಬೇಕಂತೆ ಸ್ಪಷ್ಟವಾಗಿ ಇವತ್ತಿನ ದಿವಸ ಇಷ್ಟು ದಿವಸದ ಒಳಗೆ, ಒಂದು ತಿಂಗಳ ಒಳಗಾಗಿ, ಎರಡು ತಿಂಗಳ ಒಳಗಾಗಿ ಮಾಡುತ್ತೇವೆ ಎಂದು ಹೇಳಿ.

ಶ್ರೀ ಪಟಮಕ್ಕಿ ರತ್ನಾಕರ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಒಂದು ವಿಚಾರವಾಗಿ ಸಭೆಯ ಮುಂದಿಟ್ಟಿರುತ್ತಾರೆ ಅಗತ್ಯ ಇರತಕ್ಕಂಥ ಶಿಕ್ಷಕರ ಹುದ್ದೆಯನ್ನು ಪೂರ್ಣವಾಗಿ ಭರ್ತಿ ಮಾಡುವುದಕ್ಕಾಗುವುದಿಲ್ಲ ಎಂದು, ಗುತ್ತಿಗೆ ಶಿಕ್ಷಕರನ್ನು ಮತ್ತು ಉಪನ್ಯಾಸಕರನ್ನು ಗಮನದಲ್ಲಿಟ್ಟು ಕೊಂಡು ಉಳಿದಿರತಕ್ಕಂಥವರನ್ನು ನೇಮಕಾತಿ ಸಮಿತಿ ಮುಖಾಂತರ ಭರ್ತಿ ಮಾಡುತ್ತೇವೆಂದು. ಹೇಳಿದ್ದಾರೆ. ಗುತ್ತಿಗೆ ಶಿಕ್ಷಕರು ಮತ್ತು ಉಪನ್ಯಾಸಕರು ೪ ವರ್ಷಗಳಿಂದ ಸೇವೆ ಮಾಡಿದ್ದಾರೆ. ರಿಕ್ರೂಟ್‌ಮೆಂಟ್ ಸಮಿತಿ ಮುಖಾಂತರ ನೇರವಾಗಿ ನೇಮಕವನ್ನು ಮಾಡುತ್ತಾರೆ. ಆಗ ಸೀನಿಯಾರಿಟಿ ಯಾರಿಗೆ ಹೋಗುತ್ತದೆ. ೪ ವರ್ಷಗಳಿಂದ ಸೇವೆ ಸಲ್ಲಿಸಿದ ಇವರ ಸೇವಾ ಹಿರಿತನ ಹೋಗುವುದಿಲ್ಲವೇ ? ಇದನ್ನು ಆಷ್ಟು ಲಘುವಾಗಿ ಪರಿಗಣಿಸುವ ಅಗತ್ಯ ಇಲ್ಲ. ಗುತ್ತಿಗೆ ಶಿಕ್ಷಕರನ್ನು ಮತ್ತು ಉಪನ್ಯಾಸಕರನ್ನು ನೇಮಕ ಮಾಡುವಾಗ ಹೊಸದಾಗಿ ನಿಯಮಾವಳಿಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಹೊಸದಾಗಿ ಇದರ ಬಗ್ಗೆ ನಿಯಮ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಅಂತಹ ವ್ಯತ್ಯಾಸ ಏನು ಇದೆ ಇದರಲ್ಲಿ ? ಸಂದರ್ಶನ ಆಗಿದೆ, ರೋಸ್ಟರ್ ಸಿಸ್ಟಮ್ ಇದೆ ಎಲ್ಲಾ ಕ್ರಮ ಗಳೂ ಆಗಿರುವಾಗ ಇವರನ್ನು ಖಾಯಂ ಮಾಡುವುದರಲ್ಲಿ ಮೂಲಭೂತವಾದ ತೊಂದರೆ ಏನು ಇದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸುಮಾರು ೧೦, ೪೦ ಜನರ ಜೀವನ ಮರಣ ಪ್ರಶ್ನೆ ಇದು. ಮರಣದ್ದು ಅಲ್ಲ, ಜೀವನದ ಪ್ರಶ್ನೆ. ಕೆಲವು ನಿಯಮಾವಳಿಗಳು ಅದರ ಇದೆ. ಪ್ರಕಾರ ಮಾಡಬೇಕು ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ ಕ್ಯಾದರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡ ಬೇಕು. ಡಿ. ಪಿ. ಎ, ಆರ್. ಗೆ ಹೋಗಬೇಕು, ಲಾ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕು, ಸ್ವಲ್ಪ ಕಾಲಾವಕಾಶ ಬೇಕು, ಮುಂದು ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ನಿರ್ದಿಷ್ಟವಾಗಿ ಯಾವಾಗ ಮಾಡುತ್ತೇವೆಂದು ಹೇಳಲಿಲ್ಲ. ೧೦ ದಿವಸ, ೧೫ ದಿವಸದಲ್ಲಿ ಮಾಡುತ್ತೇವೆಂದು ಹೇಳಲಿ. ಹಿಂದಿನ ಮಂತ್ರಿಗಳು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರು. ಒಂದು ವರ್ಷ ಆಯಿತು. ಇವರು ಮಾಡುತ್ತೇವೆಂದು ಹೇಳುತ್ತಾರೆ. ನಾಳೆ ಜೀವರಾಜ್ ಆಳ್ವ ಇವರು ಹೇಳಿದ್ದಕ್ಕೆ ಒಪ್ಪುವುದಿಲ್ಲ. ಅವರು ಯೂನಿವರ್ಸಲ್ ಅಂದರೆ ಯೂನಿವರ್ಸಿಟಿ ಮಿನಿಸ್ಟರ್.

ಶ್ರೀ ಎಸ್. ಎಸ್. ಕೃಷ್ಣನ್.—ಯೂನಿವರ್ಸಲ್ ಮಿನಿಸ್ಟರ್ ಅಂದರೂ ತಪ್ಪಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಅನೇಕ ಸಲ ಬೇರೆ ಹೇಳುತ್ತಾರೆ. ಇವರು ಒಂದು ಹೇಳಿಕೆ ಕೊಟ್ಟಗ, ಅವರು ಒಂದು ಬೇರೆ ರೀತಿಯ ಹೇಳಿಕೆ ಕೊಡುತ್ತಾರೆ. ೧೫ ದಿವಸದಲ್ಲಿ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರೆ ಈ ಸಮಸ್ಯೆ ಬಗೆಹರಿಯುತ್ತದೆ. ಬಾಟ್ಲಿಂಗ್ ಕಾಂಟ್ರಾಕ್ಟ್ ಮಾಡು ವುದಕ್ಕೆ ರೂಲ್ಸ್, ಅಂಡ್ ರೆಗ್ಯುಲೇಷನ್ಸ್ ಮಾಡಲಿಲ್ಲ. ಒಂದೂ ತಿಂಗಳಲ್ಲಿ ಮಾಡಿಕೊಟ್ಟರು. ರಾತ್ರೋರಾತ್ರಿ ಕಮೀಷನರ್ ಅವರನ್ನು ಕರೆದು, ಹೋಮ್ ಸೆಕ್ರೆಟರಿಯವರನ್ನು ಕರೆದು ವಿಥಿನ್ ೧೫ ಡೇಸ್ ಬಾಟ್ಲಿಂಗ್ ರೂಲ್ಸ್ ಅಮೆಂಡ್ ಮಾಡಿದ್ದಾರೆ.

ಶ್ರೀ ರಮೇಶ್ ಕುಮಾರ್.—ಅಧ್ಯಕ್ಷರೇ, ಒಂದು ವಿಷಯ.....

ಶ್ರೀ ಎಂ. ಮಲ್ಲಿಕಾರ್ಜುನ ಎಂ. ಖರ್ಗೆ.—ದಯವಿಟ್ಟು ೧೫ ದಿವಸದಲ್ಲಿ ಮಾಡುತ್ತೇವೆಂದು ಹೇಳಿಬಿಡಿ.

ಶ್ರೀ ರಮೇಶ್ ಕುಮಾರ್.—ಈಗ ಏನು ಪರಿಸ್ಥಿತಿ ಇದೆ ಅಂದರೆ ಎಲ್ಲರೂ ಮಂತ್ರಿಗಳ ಬಗ್ಗೆ ಕಠಿಣವಾಗಿ ತೋರಿಸಿದೆ ಮಾತನಾಡಿದ್ದಾರೆ, ಆಡಳಿತ ಪಕ್ಷದ ಸದಸ್ಯರು ಕೂಡ ಮಂತ್ರಿಗಳ ಬಗ್ಗೆ ವಿರೋಧ ವ್ಯಕ್ತ ಮಾಡಿದ್ದಾರೆ, ಇದರ ಬಗ್ಗೆ ಯಾರಿಗೂ ಸಿಂಪತಿ ಇಲ್ಲವೇ ಎನ್ನಿಸುತ್ತದೆ. ಇದೆಲ್ಲಾ ಪತ್ರಿಕೆಗಳಲ್ಲಿ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ರಮೇಶ್ ಕುಮಾರ್‌ಗೆ ಸಿಂಪತಿ ಇದೆ ಎಂದು ಹೇಳುತ್ತೇವೆ.

ಶ್ರೀ ರಮೇಶ್ ಕುಮಾರ್.—ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಕ್ಯಾಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿ ೨ ಅಥವಾ ೩ ತಿಂಗಳಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ನನಗೂ ಇವರ ಬಗ್ಗೆ ಕೇಳಿ ಕೇಳಿ ಕಷ್ಟವಾಗಿದೆ. ಸ್ಪೆಸಿಫಿಕ್ ಆಗಿ ಯಾವ ಡೇಟ್‌ನಲ್ಲಿ ಮಾಡುತ್ತೇವೆಂದು ಹೇಳಲ್ಲಿ. ೧೫ ದಿವಸದಲ್ಲಿ ಮಾಡುತ್ತಾರೆಯೋ, ೨ ತಿಂಗಳಲ್ಲಿ ಮಾಡುತ್ತಾರೋ. ೩ ತಿಂಗಳಲ್ಲಿ ೬ ತಿಂಗಳಲ್ಲಿ, ಅದು ಬಿಟ್ಟು ಸುಮ್ಮನೆ ಶೀಘ್ರದಲ್ಲಿ ಮಾಡುತ್ತೇವೆಂದು ಹೇಳುವುದು ಬೇಡ. ಒಂದು ನಿರ್ದಿಷ್ಟ ಸಮಯ ಹೇಳಲಿ. ಮಾನ್ಯ ಯಡಿಯೂರಪ್ಪನವರು ಹೇಳಿದ ಪ್ರಕಾರ ಇವರಿಗೆ ಹೊಸ ಪೇ–ಸ್ಕೇಲನ್ನು ಕೊಟ್ಟರೆ ಸರ್ಕಾರಕ್ಕೆ ಏನೂ ನಷ್ಟವಾಗುವುದಿಲ್ಲ. ಏಕೆಂದರೆ, ಇವರೂ ಸಹ ಬೇರೆಯವರಂತೆ ಕೆಲಸ ಮಾಡುತ್ತಿದ್ದಾರೆ. ಇವರು ಇನ್ನೂ ಅವರಿಗಿಂತ ಹೆಚ್ಚು ಮಾನವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಬೇರೆಯವರಿಗೂ ಮತ್ತು ಇವರಿಗೂ ಏತಕ್ಕೆ ಸಂಬಳದಲ್ಲಿ ತಾರತಮ್ಯ ಮಾಡಬೇಕು ? ಈ ರೀತಿ ಮಾಡುವುದರಿಂದ ಅವರ ಮನಸ್ಸಿಗೆ ಒಂದು ರೀತಿಯ ಹಿಂಸೆಯಾಗುತ್ತದೆ. ಒಂದು ವೇಳೆ ನಾವೇ ಎನಾದರೂ ಅವರ ಜಾಗದಲ್ಲಿ ಇದ್ದಿದ್ದರೆ ನಮ್ಮ ಮನಸ್ಸಿಗೂ ಬೇಸರವಾಗುತ್ತಿತ್ತು. ಇವರು ಇಲ್ಲಿಯ ವರೆಗೆ ತಮ್ಮ ಜೀವನದಲ್ಲಿ ಎಲ್ಲ ರೀತಿಯ ಕಷ್ಟಗಳನ್ನು ಮತ್ತು ಹಿಂಸೆಗಳನ್ನು ನೋಡಿದ್ದಾರೆ. ಆದ್ದ ರಿಂದ ಈ ಎಲ್ಲದರ ಹಿನ್ನೆಲೆಯಲ್ಲಿ ಈ ಜನರ ಸಂಕಷ್ಟಗಳನ್ನು ಅರಿತುಕೊಂಡು ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಡಬೇಕು. ಇದರಲ್ಲಿ ಮಂತ್ರಿಗಳ ಸ್ಥಾನದ ಪ್ರಭಾವ ಅವರ ಮೇಲೆ ಬರುವುದು ಬೇಡ ಎಂದು ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಈಗಾಗಲೇ ನಾನು ಹೇಳಿದಂತೆ ಇದರ ಬಗ್ಗೆ ನಾವು ಎಷ್ಟು ಸಹಾನುಭೂತಿಯನ್ನು ತೋರಿಸಬೇಕಾಗಿತ್ತೋ ಅದಕ್ಕಿಂತ ಹೆಚ್ಚು ತೋರಿಸಿದ್ದೇವೆ. ಇವರಲ್ಲಿ

ಯಾರನ್ನೂ ಕೆಲಸದಿಂದ ತೆಗೆದಿಲ್ಲ. ಕಳೆದ ಎರಡು ವರ್ಷಗಳಿಂದ ಇವರನ್ನು ಕೆಲಸದಲ್ಲಿ ಮುಂದುವರಿಸಿ ಕೊಂಡು ಬಂದಿದ್ದೇವೆ. ನಾವು ರೆಕ್ರೂಟ್‌ಮೆಂಟ್ ಮಾಡುವಾಗಲೂ ಸಹ ಇವರನ್ನು ಹೊರತು ಪಡಿಸಿಯೇ ಮಾಡಿದ್ದೇವೆ. ನಾವು ಇವರ ಜೊತೆ ಮಾಡಿಕೊಂಡಿರುವ ಕಾಂಟ್ರಾಕ್ಟ್ ಪ್ರಕಾರವೇ ಸಂಬಳವನ್ನು ಕೊಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್ —ಅಂದರೆ ಸಂಬಳ ಕೊಡದೆಯೂ ಇವರ ಹತ್ತಿರ ಕೆಲಸ ಮಾಡಿಸ ಬೇಕೆಂಬುದು ತಮ್ಮ ಅಭಿಪ್ರಾಯವಿತ್ತೇ ಹೇಗೆ ?

ಶ್ರೀ ಬಿ. ಸೋಮಶೇಖರ್.—ನಾವು ಇವರನ್ನು ಯಾವುದೇ ರೀತಿಯಿಂದಲೂ ಕಡೆಗಣಿಸಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಮಂತ್ರಿಗಳು ಈ ಮೊದಲು ಕೊಟ್ಟ ಉತ್ತರ ವನ್ನೇ ಈಗಲೂ ಕೊಡುತ್ತಿದ್ದಾರೆ. ಯಾವುದೇ ಭರವಸೆಯನ್ನು ಕೊಡುತ್ತಿಲ್ಲ. ಆದ್ದರಿಂದ ಇದನ್ನು ನಾವು ವಿರೋಧಿಸಿ ಹೊರಗಡೆ ಹೋಗುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರ ಉತ್ತರವನ್ನು ಪ್ರತಿಭಟಿಸಿ ನಾವು ಹೊರಗೆ ಹೋಗಂತ್ತೇವೆ.

(ಈ ಹಂತದಲ್ಲಿ ವಿರೋಧಪಕ್ಷಗಳ ಎಲ್ಲ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಸಭೆ ಇಲ್ಲಿಗೆ ಮುಕ್ತಾಯವಾಯಿತು. ಪುನಃ ನಾಳೆ ಬೆಳಿಗ್ಗೆ ೧೧-೦೦ ಗಂಟೆಗೆ ಸಭೆ ಸಮಾವೇಶಗೊಳ್ಳುತ್ತದೆ.

(ಸದನವು ರಾತ್ರಿ 7-58ಕ್ಕೆ ಮುಂಗಿದು ಪುನಃ 10-9-1987ರಂದು ಬೆಳಿಗ್ಗೆ 11-00 ಗಂಟೆಗೆ ಸೇರಬೇಕೆಂದು ನಿಶ್ಚಯಿಸಿತು.)